HISTORY OF MAHOMED.

ಮಹಮ್ಮದನ ಚರಿತ್ರವು.

MANGALORE:
PUBLISHED BY C. STOLZ,
BASEL MISSION BOOK & TRACT DEPOSITORY.
1869.

ಕ್ರಯ: ೩ ಪೈ.

ಮಹಮ್ಮದನ ಚರಿತ್ರವು.

೧. ಆದಾಮನ ಮಕ್ಕಳಾದ ಮನುಷ್ಯರನ್ನು ಪಾಪ ಮರಣಗಳಿಂದ ರಕ್ಷಿಸ ಬೇಕೆಂದು ತಂದೆಯಾದ ದೇವರು ತನ್ನ ವಾಕ್ಯವಾಗಿರುವ ಏಕ ಪುತ್ರನನ್ನು ಲೋಕಕ್ಕೆ ಕಳುಹಿಸಿದಾಗ, ಅವನು ದಾವೀದನೆಂಬ ರಾಜಕುಲದಲ್ಲಿ ಮರಿಯಳೆಂಬ (ಮರ್ಯಂ) ಒಬ್ಬ ಕನ್ಯಳಿಂದ ಹುಟ್ಟಿ, ಯೆಹೂದ ರಾಜ್ಯದಲ್ಲಿ ಬೆಳೆದು, ಮೋಶೆ ಪ್ರವಾದಿ(ನಬಿ)ಯ ಮೂಲವಾಗಿ ಬಂದ ದೇವರ ಆಜ್ಞೆಗಳನ್ನೆಲ್ಲಾ ಕೈಕೊಂಡು ನಡೆದು, ದೇವರ ಆತ್ಮದಿಂದ ತುಂಬಿದವನಾಗಿ ಬೋಧಿಸುತ್ತಾ ಅತಿಶಯವಾದ ಪ್ರೀತಿಯ ವೃತ್ತಿಗಳನ್ನು ಮಾಡುತ್ತಾ ಬಂದ ತರುವಾಯ, ಲೋಕದ ರಕ್ಷಣೆಗಾಗಿ ತನ್ನ ಜೀವವನ್ನು ಸಹಾ ಬಲಿಯಾಗಿ ಕೊಟ್ಟು, ಸತ್ತು, ಸತ್ತವರೊಳಗಿಂದ ಎದ್ದು, ತನ್ನನ್ನು ಆಶ್ರಯ ಮಾಡಿ ಕೊಂಡವರಿಗೆ, ಸರ್ವಲೋಕಕ್ಕೆ ಹೋಗಿ ಈ ಸುವಾರ್ತೆಯನ್ನು ಎಲ್ಲಾ ಜನಾಂಗಗಳಿಗೆ ಸಾರ ಬೇಕೆಂದು ಆಜ್ಞಾಪಿಸಿ, ಪರಲೋಕಕ್ಕೇರಿ ಹೋದನು. ಆ ಬಳಿಕ ಮುಂಚೆ

ವಾಗ್ದತ್ತ ಮಾಡಿದ ಪ್ರಕಾರವೇ, ತನ್ನ ಆತ್ಮವನ್ನು ವಿಶ್ವಾಸಿಸು ವವರ ಮೇಲೆ ಹೊಯಿದು ನಿವಾಸಿಸ ಮಾಡಿದನು. ಅಪೊಸ್ತ ಲರೆಂಬ ಅವನ ಶಿಷ್ಯರು ದೇವರ ಆತ್ಮದಿಂದ ಬಲವನ್ನು ಹೊಂ ದಿ ಹೊರಟು, ಅನೇಕ ರಾಜ್ಯಗಳಿಗೆ ಹೋಗಿ, ಸುವಾರ್ತೆಯೆಂ ಬ ಇಂಜಿಲನ್ನು ತಿಳಿಸಿ, ದೇವರ ಕೃಪೆಯಿಂದ ಬಹು ಜನರನ್ನು ಯೇಸುವಿನಲ್ಲಿ ವಿಶ್ವಾಸಿಸುವ ಹಾಗೆ ಮಾಡಿದರು. ಆ ಕಾಲದ ಲ್ಲಿ ರೋಮಿಾಯರ ಮಹಾರಾಜರು ಅಜ್ಞಾನಮಾರ್ಗವನ್ನು ದೃಢ ಪಡಿಸ ಬೇಕೆಂಬ ಮನಸ್ಸಿನಿಂದ ಮುನ್ನೂರು ವರುಷಗ ಳ ವರೆಗೆ ಈ ಮತವನ್ನು ಇಲ್ಲದ ಹಾಗೆ ಮಾಡ ಬೇಕೆಂಬ ಪ್ರ ಯತ್ನವನ್ನು ನಡಿಸಿ ಇದ್ದರು; ಆದರೂ ಏನೂ ಸಾಧ್ಯವಾ ಗಲಿಲ್ಲ. ಸಾವಿರಾರು ಕ್ರೈಸ್ತರು ಉಪದ್ರವಗಳನ್ನೆಲ್ಲಾ ತಾಳಿ ಖ ಡ್ಗದಿಂದಲೂ ಅಗ್ನಿಯಿಂದಲೂ ಸತ್ತವರನ್ನು ನೋಡಿದವರಲ್ಲಿ ಹಲವರು ಕ್ರೈಸ್ತ ಮತವನ್ನು ಅನುಸರಿಸಿದರು. ಸಭೆಯವರು ಪ್ರೀತಿಯ ನಿಶ್ಚಯತ್ವದಿಂದ ಮರಣದ ಭಯವನ್ನು ಕಳೆದು ನಿತ್ಯವೂ ಹೆಚ್ಚುತ್ತಾ ಬಂದರು. ಅದನ್ನು ನೋಡಿದಾಗ, ರೋ ಮಿಾಯ ಕೈಸರರಲ್ಲಿ ಒಬ್ಬನು ದೇವರ ಕ್ರಿಯೆಯನ್ನು ಆಲೋ ಚಿಸಿ ನೋಡಿ, ತಾನು ಸಹಾ ಯೇಸುವಿನ ನಾಮದಲ್ಲಿ ವಿಶ್ವಾ ಸಿಸಿದನು. ಅಜ್ಞಾನಾಚಾರಗಳು ಆ ಸಂಸ್ಥಾನದಲ್ಲಿ ಕ್ರಮೇಣ

ನಿಂತು ಹೋದ ಮೇಲೆ, ಅನೇಕ ಜನಾಂಗಗಳು ಯೇಸುವಿ
ನ ನಾಮದಲ್ಲಿ ಆಶ್ರೈಸಿದರು. ಆಗ ಹೊರಗಿನವರ ಉಪದ್ರವ
ಗಳು ನಿಂತದರಿಂದ, ಅನೇಕ ಕ್ರೈಸ್ತರ ಪ್ರೀತಿಯು ತಣ್ಣಗಾಗಿ
ಆಲಸ್ಯವು ಹೆಚ್ಚಿದ್ದಲ್ಲದೆ ಬಹಳ ಮಂದಿ ದೇವರ ಸತ್ಯವನ್ನು
ತಿಳಿಯದೆ ಗುಂಪಾಗಿ ಬಂದರು. ಅನೇಕರು ಈ ಹೊಸ ವೇಷ
ವನ್ನು ಮಾತ್ರವೇ ಧರಿಸಲಿಕ್ಕೆ ಇಚ್ಛೈಸಿದದರಿಂದ, ಕ್ರೈಸ್ತ ಸ
ಭೆಯಲ್ಲಿ ಅನೇಕ ಕೇಡುಗಳು ಉಂಟಾಗಿ, ಮುಂಚೆ ಇದ್ದ ನಿ
ರ್ಮಲತ್ವವು ಕಾಣದೆ ಹೋಯಿತು. ಬೋಧಿಸ ಬೇಕಾದವ
ರು ಅಹಂಕಾರಿಗಳಾಗಿ ಡಂಭಾಚಾರದಿಂದ ಅಧ್ಯಕ್ಷರೆಂಬ ಹೆ
ಸರುಗಳನ್ನು ಧರಿಸಿ ವಿವಾದಿಸಿ ಭೇದವಾಗಿ ಪ್ರೀತಿಯ ಕಾ
ರ್ಯಗಳನ್ನು ಆಚರಿಸದೆ ವಿದ್ವಾಂಸರೆಂಬ ಮಾನವನ್ನು ಆಶಿ
ಸುತ್ತಾ ಬಂದರು. ಇದರಿಂದ ಅನೇಕ ಮತಭೇದಗಳು ಉಂ
ಟಾದವು. ಉಳಿದ ಜನರಿಗೆ ತಿಳುವಿಕೆಯು ಕಡಿಮೆಯಾಗಿದ್ದ
ದರಿಂದ, ವಿಶ್ವಾಸವನ್ನು ಮರೆತು ಅನೇಕ ಮಂತ್ರತಂತ್ರಾದಿಗ
ಳನ್ನು ಪ್ರಯೋಗಿಸಿ ಯೇಸು ಮರಿಯ ಮೊದಲಾದವರಿಗೆ
ಮೂರ್ತಿಗಳನ್ನು ಸಂಕಲ್ಪಿಸಿ ಆರಾಧಿಸಿದರು. ಕೆಲವರು ವನ
ವಾಸ ಮೊದಲಾದ ತಪಸ್ಸುಗಳನ್ನು ಮಾಡಿ, ದೇವರ ಕರುಣೆ
ಯನ್ನು ಆಧಾರ ಮಾಡಿ ಕೊಳ್ಳದೆ, ಅನೇಕ ಕರ್ಮಗಳನ್ನು

ಮಾಡಿ ಆತ್ಮದ ರಕ್ಷಣೆಯನ್ನು ಸಂಪಾದಿಸ ಪ್ರಯತ್ನ ಮಾಡಿದರು. ಹೀಗೆ ಹಲವು ದಿಕ್ಕುಗಳಲ್ಲಿಯೂ ಕ್ರೈಸ್ತ ಮತಕ್ಕೆ ಜೀವವಿಲ್ಲದೆ ಹೋದಾಗ್ಯೆ, ದೇವರು ಅವರ ಶಿಕ್ಷೆಗಾಗಿ ಒಂದು ಜನಾಂಗವನ್ನು ಎಬ್ಬಿಸಿ ಬಹು ಕಾಲದ ವರೆಗೆ ಜಯ ಶಿಕ್ಕುವ ಹಾಗೆ ಮಾಡಿದನು. ಆ ಜನಾಂಗವು ಅರಾಬ್ಯರೇ.

೨. ಅರಾಬ್ಯರು ಪೂರ್ವ ಕಾಲದಲ್ಲಿ ಯೆಹೂದ್ಯರ ಸುರ್ಯರ ನೆರೆಯಲ್ಲಿದ್ದರು. ಮೂರು ತರದವರ ಭಾಷೆಯು ಸುಮಾರು ಒಂದಕ್ಕೊಂದು ಸಂಬಂಧಾವಾಗಿರುತ್ತದೆ. ಅರಾಬ್ಯರು ಸಮುದ್ರತೀರದಲ್ಲಿ ಅಲ್ಲದೆ ಉಳ್ಳದೇಶದಲ್ಲಿಯೂ ಕೆಲವು ಪಟ್ಣಗಳನ್ನು ಮಾತ್ರ ಕಟ್ಟಿ ಕೃಷಿ ಕೆಲಸ ಮಾಡುತ್ತಾ ಇದ್ದರು. ಹೆಚ್ಚಾದವರು ಪೂರ್ವದಿಂದಲೇ ಕುರಿ ದನ ಕುದುರೆ ಒಂಟೆ ಮೊದಲಾದ ಹಿಂಡುಗಳನ್ನು ಶೇರಿಸಿ ಕೊಂಡು ಸಂಚರಿಸುತ್ತಾ ಮರುಭೂಮಿಯಲ್ಲಿ ಗುಡಾರ ಹೊಡ ಕೊಂಡು ರಾಜರಿಲ್ಲದೆ ಒಂದೊಂದು ಗೋತ್ರಗಳಾಗಿ ನಿವಾಸಿಸುವರು. ತಮ್ಮೊಳಗೆ ನಿತ್ಯ ಕುಲವೈರತ್ವವೂ ಶೂರತ್ವವೂ ಇದ್ದದರಿಂದ, ದೇಶದಲ್ಲಿ ಹಾದು ಹೋಗುವವರೆಲ್ಲರ ಸಂಗಡ ಕಲಹವೂ ಕೊಳ್ಳೆಯೂ ಮಾಡುವಂಥ ಸಂಪ್ರದಾಯ ಅವರಿಗಿತ್ತು. ಶಾಸ್ತ್ರದಲ್ಲಿ ಯಾರಿಗೂ ರುಚಿ ಇರಲಿಲ್ಲ. ಆದರೆ ಹಾಡಿನಲ್ಲಿಯೂ ಕಥೆಯಲ್ಲಿ

ಯೂ ರುಚಿ ಕಂಡಿತು. ಪಟ್ಟಣಗಳಲ್ಲಿ ಮಕ್ಕ ಎಂಬದು ವ್ಯಾಪಾರದ ದೆಶೆಯಿಂದ ಪ್ರಖ್ಯಾತಿ ಹೊಂದಿದ್ದಾಗಿತ್ತು. ಅಲ್ಲಿ ಕಾಬ ಎಂಬ ಪೌರಾಣಿಕ ಗುಡಿ ಉಂಟು. ಅದು ಚತುರಾಶ್ರಯವಾಗಿ ಕಟ್ಟಿದ್ದು. ಕುಲಪಿತನು ಅಬ್ರಹಾಮನ ಮಗನಾದ ಇಷ್ಮಯೇಲನೆಂಬ ವರ್ತಮಾನ ಉಂಟು. ಅದರಲ್ಲಿ ಆಕಾಶದಿಂದ ಬಿದ್ದ ಒಂದು ಕಪ್ಪು ಕಲ್ಲೂ ಜಂಜಂ ಎಂಬ ಭಾವಿಯೂ ಪ್ರಧಾನವಾಗಿವೆ. ಅದಕ್ಕಾಗಿ ತೀರ್ಥಯಾತ್ರೆಯು ಅರಾಬ್ಯರೆಲ್ಲರಿಗೆ ಅವಶ್ಯವಾಗೆದೆ. ಗುಡಿಯಲ್ಲಿ ಏಳು ಗ್ರಹಗಳನ್ನು ವಂದಿಸಿ ಏಳು ಪ್ರದಕ್ಷಿಣ ಮಾಡುವರು. ಅವುಗಳ ಹೊರ್ತು ಮುನ್ನೂರ ಅರ್ವತ್ತು ದೇವವಿಗ್ರಹಗಳು ಉಂಟಾಗಿದ್ದವು. ಅವುಗಳಲ್ಲಿ ಕೆಲವುಗಳಿಗೆ ಮನುಷ್ಯರನ್ನು ಕೊಂದು ಬಲಿ ಅರ್ಪಿಸುವರು. ಆ ಗುಡಿಗೆ ಯಜಮಾನರಾಗಿ ಅಭಿವೃದ್ಧಿ ಹೊಂದಿದ ಒಂದು ಪ್ರಭುವಂಶ ಉಂಟು. ಅದಕ್ಕೆ ಕೋಜಕುಲವೆಂಬ ಹೆಸರು. ಆ ಮೇಲೆ ಅವರ ಸಮ್ಮಂಧಿಗಳಾದ ಕೊರೇಷ್ ಕುಲಕ್ಕೆ ಗುಡಿಯ ಅಧಿಕಾರವು ಶಿಕ್ಕಿತು. ಶ್ರೇಷ್ಠವಾದ ಒಂದೊಂದು ವಂಶಕ್ಕೆ ಬೇರೆ ಬೇರೆ ಪರದೇವತೆಗಳೂ ದೆವ್ವ(ಬುದ್ದು)ಗಳೂ ಇದ್ದವು. ಕೆಲವು ಕುಲಗಳಿಗೆ ಯೆಹೂದ ಮತವು ಸಂಪ್ರದಾಯವಾಗಿ ಬಂತು. ನಾನಾ ತರದವ

ರು ವಿರೋಧವಿಲ್ಲದೆ ಜೀವನ ಮಾಡುವರು. ತೌರೆತ್(ಪಂಚ ಗ್ರಂಥ) ಇಂಜಿಲ್(ಸುವಾರ್ತೆ) ಅರಬಿ ಭಾಷೆಯಲ್ಲಿ ಟೀಕಿಸಿದ್ದರಿಂದ, ಒಬ್ಬನೇ ದೇವರ ಹೊರ್ತು ಮತ್ತ್ಯಾರಿಲ್ಲವೆಂದು ವಿಗ್ರಹಾರಾಧಕರಿಗೂ ಸರ್ವಸಮ್ಮತವಾಗಿದೆ.

೩. ಹೀಗಿರುವ ಕಾಲದಲ್ಲಿ ಕ್ರಿಸ್ತಾಬ್ದ ೫೭೦ನೇಯಲ್ಲಿ ಕೊರೇಷ್ ಕುಲದಲ್ಲಿ ಅಬ್ದುಲ್‌ಮೊತಾಲೇಬ್ ಎಂಬವನ ನಡುಮಗನಾದ ಅಬ್ದುಲ್ಲ ಎಂಬ ಪ್ರಭುವಿಗೆ ಮುಹಮ್ಮದ್ ಅಬಲ್‌ಕಾಸ್ಮಿಯು ಹುಟ್ಟಿದನು. ತನ್ನ ಚಿಕ್ಕತನದಲ್ಲಿಯೇ ತಂದೆಯೂ ತಾಯಿಯೂ ಸತ್ತಾಗ, ೫ ಒಂಟೆಗಳೂ ಒಬ್ಬ ಹಬಷಿ ದಾಸಿಯೂ ಮಾತ್ರ ಅವನಿಗೆ ಬಾಧ್ಯವಾಗಿ ಶಿಕ್ಕಿದವು. ಉಳಿದದ್ದನ್ನು ಅವನ ಮಾವಂದ್ಯರು ತಮ್ಮ ವಶ ಮಾಡಿ ಕೊಂಡರು. ಹೀಗಿರಲಾಗಿ ಅಬ್ದುಲ್‌ಮೊತಾಲೇಬನು ತನ್ನ ಮೊಮ್ಮಗನನ್ನು ಸಾಕಿ ಮರಣದ ಸಮಯದಲ್ಲಿ ತನ್ನ ಚೊಚ್ಚಲಮಗನಾದ ಅಬ್ದುಲ್ಲನ ಅಣ್ಣನಾದ ಅಬುತಾಲೇಬನನ್ನು ಕರೆದು ಮುಹಮ್ಮದನನ್ನು ಸಂರಕ್ಷಿಸ ಬೇಕೆಂದು ಆಜ್ಞಾಪಿಸಿದನು. ಈ ಅಬುತಾಲೇಬನು ತಂದೆಯ ಅಪ್ಪಣೆಯನ್ನು ಅನುಸರಿಸಿ ಮುಹಮ್ಮದನನ್ನು ಬಹು ಪ್ರೀತಿಯಿಂದ ಸಾಕಿ ಆಯುಧ ಅಭ್ಯಾಸವನ್ನೂ ವರ್ತಕಕೆಲಸವನ್ನು ಕಲಿಸಿ ವ್ಯಾಪಾರಕ್ಕೋಸ್ಕರ

ಸುರ್ಯದೇಶಕ್ಕೆ ಪ್ರಯಾಣವಾಗಿ ಹೊರಡುವಾಗ, ಹದಿಮೂರು ವರುಷದವನಾದ ಇವನನ್ನು ಕರ ಕೊಂಡು ಹೋದನು. ತರುವಾಯ ಮಾನವೂ ಐಶ್ವರ್ಯವೂ ಉಳ್ಳ ಒಬ್ಬ ವರ್ತಕನ ವಿಧವೆಗೆ ಇವನ ಸದ್ಗುಣಗಳನ್ನು ತಿಳಿಸಿದದರಿಂದ, ಆ ಖದೀಜ ಎಂಬವಳು ೨೫ ವರ್ಷ ಪ್ರಾಯದವನಾದ ಮಹಮ್ಮದನನ್ನು ತನ್ನ ಚಾಕ್ರಿಯಲ್ಲಿ ಶೇರಿಸಿ ಅವನನ್ನು ಮುತ್ಸದಿಯಾಗಿಟ್ಟಳು. ಅವನು ಖದೀಜಳ ದಲ್ಲಾಳಿಯಾಗಿ ಅವಳ ಸರಕುಗಳನ್ನು ಬೇರೆ ಬೇರೆ ಸಂತೆಗಳಿಗೆ ತೆಗೆದು ಕೊಂಡು ಹೋಗುತ್ತಾ ಬರುತ್ತಾ ಇದ್ದು ತನ್ನ ಉದ್ಯೋಗವನ್ನು ಬಹು ಜಾಗ್ರತೆಯಲ್ಲಿಯೂ ಸತ್ಯದಲ್ಲಿಯೂ ನಡಿಸುವದನ್ನು ನೋಡಿ, ಅವಳು ಅವನನ್ನು ನಂಬಿ ಮದುವೆ ಮಾಡಿ ಕೊಂಡಳು. ಈ ಮದುವೆಯಿಂದ ಅವನಿಗೆ ಸಂಪತ್ತು ಉಂಟಾದದರಿಂದ, ಬಹು ಮಂದಿ ಹೆಂಡರನ್ನು ತೆಗದು ಕೊಂಡು ಭಕ್ಷಣ ಪಾನಗಳಲ್ಲಿ ಅಲ್ಲ, ಭೋಗದಲ್ಲಿಯೂ ಸಾಂಬ್ರಾಣಿ ಮೊದಲಾದ ಸುಗಂಧಗಳಲ್ಲಿಯೂ ಸಂತೋಷ ಪಡುತ್ತಾ ನಾಲ್ವತ್ತನೇ ವರ್ಷದ ವರೆಗೆ ವ್ಯಾಪಾರಿಯಾಗಿ ಕಾಲ ಕಳೆದನು. ಒಂದೊಂದು ಪ್ರಯಾಣದಲ್ಲಿ ಯೆಹೂದ ಕ್ರೈಸ್ತರನ್ನು ನೋಡುತ್ತಾ ಬಂದದರಿಂದ, ತೌರೆತಿನಲ್ಲಿಯೂ ಇಂಜಿಲಿನಲ್ಲಿಯೂ ಉಳ್ಳ ಕೆಲವು ಸತ್ಯಗಳನ್ನು ತಿಳಿ

ದು ಕೊಂಡು ವಿಗ್ರಹಗಳನ್ನು ಆರಾಧಿಸುವದು ಪಾಪವೆಂದು ನಿಶ್ಚೈಸ ತೊಡಗಿದನು. ಆದರೆ ೬೧೦ನೇ ವರುಷದಲ್ಲಿ ಒಂದು ರಾತ್ರಿಯಲ್ಲಿ ಹೇರ ಎಂಬ ಗವಿಗೆ ಹೋಗಿ ಧ್ಯಾನಿಸುತ್ತಾ ಇರುವಾಗ, ಗಾಬ್ರಿಯೇಲ್ ಎಂಬ ದೂತನು (ಮಲಾಖ್) ಅವನಿಗೆ ಪ್ರತ್ಯಕ್ಷವಾಗಿ—ಅಬ್ರಹಾಮನು ವಿಶ್ವಾಸಿಸಿದ ಪ್ರಕಾರ ಒಬ್ಬ ದೇವರನ್ನು ನಂಬ ಬೇಕು; ಆ ದೇವರಿಗೆ ನೀನು ಪ್ರವಾದಿಯಾಗಿ ನಿಂತು ಇಸ್ಲಾಮನ್ನು ನಡಿಸ ಬೇಕೆಂದು ತಿಳಿಸಿದ ಪ್ರಕಾರ ಒಂದು ದರ್ಶನದಲ್ಲಿ ಕಾಣ ಬಂತು. ಈ ಬೋಧನೆಯನ್ನು ಹೆಂಡತಿಗೂ ಅವಳ ಮಾವನಾದ ವಾರಕನಿಗೂ ತಿಳಿಸಿ ನಂಬುವ ಹಾಗೆ ಮಾಡಿದದರಿಂದ, ಉಭಯತರು ಅನುಸರಿಸಿದರು. ಮತ್ತು ತನ್ನ ಗುಲಾಮನಾದ ಜೈದ್‌ಯಿಬನ್ ಹರಿತ ಎಂಬವನು ಎರಡನೇ ಶಿಷ್ಯನಾದನು. ಇವನು ತನ್ನ ಭಕ್ತಿಗೋಸ್ಕರ ಬಿಡುಗಡೆ ಹೊಂದಿದನು. ಅಂದಿನಿಂದ ಇಂದಿನ ವರೆಗೂ ಮುಸಲರಲ್ಲಿ ಯಾವ ಗುಲಾಮನಾದರೂ ಖುರಾನನ್ನು ನಂಬಿದರೆ, ಸಂಗಡಲೇ ಅವನು ಬಿಡುಗಡೆಯನ್ನು ಹೊಂದಿ ಮುಸಲರ ಮರ್ಯಾದೆಯನ್ನು ಅನುಭವಿಸುವ ಪದ್ಧತಿಯು ಉಂಟಾಯಿತು. ಅಬುತಾಲೇಬನ ಮಗನೂ ಮಹಮ್ಮದನ ದಾಯಾದಿಯೂ ಚಿಕ್ಕತನದಿಂದಲೇ ಶೂರನೂ ಆಗಿರುವ ಆಲಿ

ಯು ವಿಶ್ವಾಸಿಸಿ, ಮೂರನೇ ಶಿಷ್ಯನಾದನು. ಇವನು ಆ ಮೇಲೆ ಬಹು ದೊಡ್ಡ ಮನುಷ್ಯನಾಗಿಯೂ ನಾಲ್ಕನೇ ಖಲೀಫನಾಗಿಯೂ ಇದ್ದದರಿಂದ, ಅನೇಕಾವರ್ತಿ ಮೊದಲನೇ ಶಿಷ್ಯನೆಂದು ಕರೆಯಲ್ಪಡುತ್ತಾನೆ.

ಆ ಮೇಲೆ ಮಹಮ್ಮದನು ನಾಲ್ಕನೆಯವನಾಗಿಯೂ ಮಕ್ಕ ಪಟ್ಣದಲ್ಲಿ ಮುಖ್ಯಸ್ಥನಾಗಿಯೂ ಕೊರೇಷಿತರಲ್ಲಿ ಬಹು ಅಧಿಕಾರವುಳ್ಳವನಾಗಿಯೂ ಇದ್ದ ಅಬೂಬೆಕರ್ ಎಂಬವನನ್ನು ತನ್ನ ಮತಕ್ಕೆ ಬಹು ಪ್ರಯತ್ನದಿಂದ ಶೇರಿಸಿ ಕೊಂಡನು. ಇವನ ಪ್ರಯತ್ನದಿಂದ ಮಕ್ಕ ಪಟ್ಣದ ಮುಖ್ಯಸ್ಥರಲ್ಲಿ ಇನ್ನೂ ಐವರು ಈ ಮತಕ್ಕೆ ಶೇರಿಸಲ್ಪಟ್ಟರು. ಇವರು ಮಹಮ್ಮದನಲ್ಲಿಯೂ ಒಬ್ಬೊಬ್ಬರಲ್ಲಿಯೂ ನಂಬಿಗಸ್ತರಾಗಿದ್ದ ಕಾರಣ ೬ ಮಂದಿ ಸ್ನೇಹಿತರೆಂದು ಕರೆಯಲ್ಪಟ್ಟರು. ಈ ಪ್ರಕಾರ ಮಹಮ್ಮದನು ತನ್ನ ಮತದ ಪ್ರಾರಂಭದ ಮೂರು ವರುಷಗಳೊಳಗೆ ತನ್ನ ಗುಪ್ತ ಬೋಧನೆಯಿಂದ ಮಾತ್ರ ಒಂಭತ್ತು ಮಂದಿಯನ್ನು ಶಿಷ್ಯರಾಗ ಮಾಡಿ ಕೊಂಡನು. ಮಹಮ್ಮದನು ಇವರನ್ನು ಶಿಷ್ಯರಾಗ ಮಾಡಿ ತನಗೆ ಬರಹವು ತಿಳಿಯದೆ ಇರುವದರಿಂದ, ಆಗಾಗ್ಯೆ ಮನಸ್ಸಿಗೆ ಬಂದ ಬೋಧನೆಗಳನ್ನು ಅವರಿಂದ ಓಲೆಯಲ್ಲಿಯೂ ಚರ್ಮದ ವಹಿಗಳಲ್ಲಿ

ಯೂ ಬರಿಸಿದನು. ಹೀಗೆ ಖುರಾನು ಉಂಟಾಯಿತು. ಅ ದಕ್ಕೆ ಮಾಪಿಳ್ಳೆಯರು ನಾಲ್ಕನೇ ವೇದವೆಂದು ಹೆಸರಿಟ್ಟಿದ್ಧಾ ರೆ. ಮೋಶೆ ಯೇಸು ಮೊದಲಾದವರು ಅಲ್ಲಾ ಕಳುಹಿಸಿದ ಪ್ರವಾದಿಗಳು ಆದರೂ ಎಲ್ಲರಲ್ಲಿ ದೊಡ್ಡವನು ಮುಹಮ್ಮದ ನೆಂದು ಹೇಳುತ್ತಾರೆ.

೪. ಆದರೆ ಮುಹಮ್ಮದನು ತನ್ನನ್ನು ಕಾಪಾಡಲಿಕ್ಕೆ ಈ ಗ ಬೇಕಾದಷ್ಟು ಬಲವುಳ್ಳ ಸ್ನೇಹಿತರನ್ನು ಸಂಪಾದಿಸಿ ಕೊಂ ಡದರಿಂದ, ತನ್ನ ಅಭಿಪ್ರಾಯವನ್ನು ಇನ್ನು ಮರೆ ಮಾಡದೆ, ತಾನು ದೇವರಿಂದ ಕಳುಹಿಸಲ್ಪಟ್ಟಿದ್ಧೇನೆಂದು ಪ್ರಕಟವಾಗಿ ಹೇಳಿದನು. ತನ್ನ ತಾತ್ಪರ್ಯವು ಅನುಕೂಲವಾಗುವ ಹಾ ಗೆ, ಮುಖ್ಯವಾಗಿ ತನ್ನ ನೆಂಟರನ್ನು ತನ್ನ ಕಡೆಗೆ ತಿರುಗಿಸ ಬೇ ಕಾದದರಿಂದ, ಇದನ್ನು ಪೂರೈಸುವ ಹಾಗೆ ತನ್ನಿಂದಲಾಗುವ ಮಟ್ಟಿಗೂ ಪ್ರಯತ್ನ ಮಾಡಿದನು. ಅದು ಹ್ಯಾಗಂದರೆ, ಆಲಿ ಎಂಬ ತನ್ನ ಶಿಷ್ಯನ ಮುಖಾಂತ್ರ ದೊಡ್ಡ ಔತಣವನ್ನು ಮಾ ಡಿಸಿ ತನ್ನ ಮನಸ್ಸಿನಲ್ಲಿರುವಂಥಾದ್ದನ್ನು ತಿಳಿಸುವದಕ್ಕೋಸ್ಕರ ಅವರನ್ನು ಕರಿಸಿದನು. ಕರೆಯಲ್ಪಟ್ಟವರಲ್ಲಿ ನಾಲ್ವತ್ತು ಮಂ ದಿ ಬಂದು ಭೋಜನ ಮಾಡುವಾಗ, ಅಬುಲಹೇಬನು ಮು ಹಮ್ಮದನು ಪ್ರಸಂಗ ಮಾಡುವದಕ್ಕಿಂತ ಮುಂಚೆಯೇ ಎದ್ದು,

ಮಿಕ್ಕಾದವರನ್ನು ಸಹಾ ತನ್ನ ಸಂಗಡ ಏಳ ಮಾಡಿದದರಿಂದ, ಅಲ್ಲಿ ಮತ್ತೊಂದು ಔತಣ ಮಾಡ ಬೇಕಾಯಿತು. ಇವರು ಮರುದಿವಸದಲ್ಲಿ ತಿರುಗಿ ಔತಣಕ್ಕೆ ಬಂದಲ್ಲಿ, ಮುಹಮ್ಮದನು ಅವರಿಗೆ ಸಾರಿ ಹೇಳಿದ್ದೇನಂದರೆ—ಈಗ ನಾನು ನಿಮಗೆ ಮಾಡುವ ಉಪಕಾರಕ್ಕಿಂತ ಹೆಚ್ಚಾದ ಉಪಕಾರವನ್ನು ತನ್ನ ಸಂತಾನದವರಿಗೆ ಮಾಡುವಂಥ ಒಬ್ಬನನ್ನಾದರೂ ಅರಬಿ ದೇಶದಲ್ಲಿ ಎಲ್ಲಿಯೂ ನಾನು ನೋಡಲಿಲ್ಲ; ಯಾಕಂದರೆ ನಾನು ಇಹದಲ್ಲಿಯೂ ಪರದಲ್ಲಿಯೂ ನಿಮಗೆ ಸುಖ ಕೊಡುತ್ತೇನೆ; ಸರ್ವಶಕ್ತನಾದ ದೇವರು ನಿಮ್ಮನ್ನು ತನ್ನ ಬಳಿಗೆ ಕರಿಯ ಬೇಕೆಂದು ನನಗಾಜ್ಞಾಪಿಸಿದ್ಧಾನೆ; ಆದ ಕಾರಣ ನಿಮ್ಮಲ್ಲಿ ಯಾರು ಇದರ ವಿಷಯ ಸಹಾಯ ಮಾಡುವದಕ್ಕೆ ನನ್ನ ಸಹೋದರನಾಗಿಯೂ ಪ್ರಧಾನಿಯಾಗಿಯೂ (ವಜೀರ್) ಇರುವನು? ಎಂದು ಕೇಳಿದಲ್ಲಿ, ಅವರು ಬೇಡೆಂದು ಹೇಳಿ ಸುಮ್ಮನಿದ್ದ ಮೇಲೆ, ಆಲಿಯು—ಓ ದೇವರ ಪ್ರವಾದಿಯೇ, ನಾನು ನಿನ್ನ ವಜೀರ್ (ಪ್ರಧಾನಿ) ಆಗಿದ್ಧೇನೆಂದು ಕೂಗಿ, ಯಾರಾದರೂ ನಿನಗೆ ವಿರೋಧವಾಗಿ ಮಾತಾಡಿದರೆ, ಇಲ್ಲವೆ ಮಾಡಿದರೆ, ಅವರ ಹಲ್ಲುಗಳನ್ನೂ ಕಣ್ಣುಗಳನ್ನೂ ಕಿತ್ತು ಹೊಟ್ಟೆಯನ್ನು ಶೀಳಿ ಕಾಲುಗಳನ್ನು ಮುರಿದು ಹಾಕುವೆನೆಂದು ಹೇಳಿದನು.

ಆಗ ಮುಹಮ್ಮದನು ಬಹು ಪ್ರಿಯಕರವಾದ ಮುಖ ದಿಂದ ಆಲಿಯನ್ನು ಅಪ್ಪಿ ಕೊಂಡು, ಅವರಿಗೆ—ಇವನೇ ನನ್ನ ಸಹೋದರನೂ ನನ್ನ ಬಾಧ್ಯನೂ ಖಲೀಫನೂ ಆಗಿದ್ದಾನೆ; ಇವನ ಮಾತು ಎಲ್ಲರೂ ಕೇಳ ಬೇಕೆಂದು ಹೇಳಲು, ಭೋಜ ನಕ್ಕೆ ಬಂದವರೆಲ್ಲರೂ ಬಹಳ ಗೌಜಿಯಿಂದ ನೆಗಾಡಿ ಅಬುತಾ ಲೇಬನಿಗೆ—ನಿನ್ನ ಮಗನನ್ನು ಈಗ ವಂದಿಸೆಂದು ಕುಚೋದ್ಯ ಮಾಡಿದರು. ಅಂದಿನಿಂದ ಮಕ್ಕ ಪಟ್ಟದವರು ಕೆಲವು ಕಾಲ ದ ವರೆಗೆ ಬಹಳ ವಿರೋಧ ಮಾಡಿದರು. ಕಾಬದ ಬೀಗದ ಕೈಗಳುಳ್ಳ ಅಬುಸೊಫಿಯಾನ್ ಮಹಮ್ಮದನ ಜನರನ್ನು ಉ ಪದ್ರ ಪಡಿಸ ತೊಡಗಿದನು. ಅಬುತಾಲೇಬನು ಮಾತ್ರ ಪ್ರವಾ ದಿಗೆ (ನಬಿ) ಸಹಾಯ ನಿಂತನು. ಅವನು ಸಹಾ ಸತ್ತ ಮೇ ಲೆ, ನೆಂಟರೆಲ್ಲರು ಕೂಡ ಆಲೋಚಿಸಿ ರಾತ್ರಿಯಲ್ಲಿ ಮಹ ಮ್ಮದನನ್ನು ಕೊಲ್ಲುವದಕ್ಕೆ ನಿಶ್ಚೈಸಿದಾಗ, ಅವನು ಹೆದರಿ ತ ನ್ನ ಮಂಚದ ಮೇಲೆ ಆಲಿಯನ್ನು ಮಲಗಿಸಿ ತಾನು ಓಡಿ ಹೋಗಿ, ಮಕ್ಕ ಪಟ್ಟದ ಸಂಗಡ ವೈರತ್ವದಲ್ಲಿರುವ ಮದೀನ ದಲ್ಲಿ ಶೇರಿ ಉಳು ಕೊಂಡನು. ಆ ದಿವಸವು ಮುಸಲರಿಗೆ ವರುಷಗಳ ಲೆಖ್ಖಕ್ಕೆ ಆರಂಭವಾಗಿ ಬಂದದೆ. ೬೨೨ಕ್ರಿಸ್ತಾ ಬ್ದ (ಕರ್ಕಾಟಕ ಮಾಸ ಮೊದಲನೇ ತೇದಿ) ಜುಲಾಯಿ ೧೬ನೇ

ತಾರೀಕು ಕೊಲ ಉಂಟಾಗುವದಕ್ಕಿಂತ ಮುಂಚೆ ೨೦೦ ಸಂವತ್ಸರಗಳಾಗಿವೆ.

೫. ಪ್ರವಾದಿಯು ಮದೀನದಲ್ಲಿ ಶೇರಿದ ದಿನದಿಂದ ಆ ಪಟ್ಣದವರಿಗೆ ಮುಖ್ಯಸ್ಥನಾದನು. ಮಕ್ಕದಿಂದ ಬರುತ್ತಾ ಹೋಗುತ್ತಾ ಇದ್ದ ವ್ಯಾಪಾರಿಗಳ ಗುಂಪಿನ ಸಂಗಡ ಕಲಹ ಮಾಡುತ್ತಾ ಕೊಳ್ಳೆ ಇಡುತ್ತಾ ತನ್ನ ಸಂಗಡಿಗರಿಗೆ ಸಂತೋಷ ಹುಟ್ಟುವ ಹಾಗೆ ಮಾಡಿ ಯುದ್ಧ ಮಾಡುವದಕ್ಕೂ ಸಿದ್ಧಮಾಡಿ ಕೊಂಡನು. ೬೨೪ನೇ ವರ್ಷದಲ್ಲಿ ಅಬುಸೊಫಿಯಾನನ ಸೇನೆಯನ್ನು ಜೈಸಿದನು. ಮಾರಣೇ ವರ್ಷದಲ್ಲಿ ಪ್ರವಾದಿಯು ಹೋರಾಡಿ ಅಪಜಯ ಪಟ್ಟನು. ತನಗೆ ಘಾಯವಾಗಿದ್ದರೂ, ಮಕ್ಕದವರು ಮದೀನದಲ್ಲಿ ಒಳಗೆ ಪ್ರವೇಶಿಸದೆ ಹೋದರು. ಆ ಮೇಲೆ ಯೆಹೂದ ಮತವನ್ನು ಅನುಸರಿಸಿದ ಕೆಲವು ವಂಶಸ್ಥರು ಇಸ್ಲಾಮದಲ್ಲಿ ಕೂಡಿ ಕೊಳ್ಳದ್ದರಿಂದ, ಕಠಿಣವಾದ ಕಾಳಗವು ಉಂಟಾದಾಗ, ಆಲಿಯು ಗೆದ್ದು ಪ್ರವಾದಿಗೆ ಕಪ್ಪ ಕೊಡುವಂತೆ ಮಾಡಿ ಇಟ್ಟನು. ಅದಕ್ಕೆ ಮುಂಚೆ ಮೊಹಮ್ಮದನು ಹೇಳಿದ್ದು—ತೌರೆತೂ ಇಂಜಿಲೂ ಬೇರೆ ಭಾಷೆಯವರಿಗೆ ಬೇಕು, ಹೊಸ ವೇದವು ಅವರಿಗೆ ಅವಶ್ಯವಿಲ್ಲ; ಉಳಿದ ಭಾಷೆಗಳನ್ನು ತಿಳಿಯದ ಅರಬಿಯರಿಗೆ ಮಾ

ತ್ರ ಇಸ್ಲಾಮ್ ಸಾಕು. ಬೇರೊಬ್ಬರು ದೇವರು ಕೊಟ್ಟ ವೇದಗಳನ್ನು ಅನುಸರಿಸಿ ನಡಿಯಲಿ! ನೀವು ಕಿತಾಬು (ಪುಸ್ತಕ)ಗಾರರ ಸಂಗಡ ವಾದಿಸ ಬೇಡಿರೆಂದು ೫, ೬, ೪೨, ೨೯ ಸುರಗಳಲ್ಲಿ (ಸಂಧಿಗಳಲ್ಲಿ) ತಿಳಿಸಿದನು. ಈಗ ಜಯದ ನಿಮಿತ್ತ ಕೀರ್ತಿಯು ಹೆಚ್ಚಾದದರಿಂದ, ಪುಸ್ತಕದವರು ತೌರೆತಿನಲ್ಲಿಯೂ ಇಂಜಿಲಿನಲ್ಲಿಯೂ ತಪ್ಪು ತಿದ್ದಿದ್ದಾರೆಂದೂ ಎಲ್ಲರಿಗೂ ಇಸ್ಲಾಮ್ ಮಾತ್ರವೇ ಅವಶ್ಯವೆಂದೂ ಖಂಡಿತವಾಗಿ ಹೇಳಿದನು. ಸುತ್ತಲು ಇರುವ ಅರಸರಿಗೆ ತನ್ನನ್ನು ಶೇರ ಬೇಕೆಂದು ಮಹಮ್ಮದನು ಕಾಗದ ಕಳುಹಿಸಿದನು. ಅದನ್ನು ಅವರು ಘನ ಪಡಿಸದೆ ಹೋದದರಿಂದ, ಕೋಪಿಸಿ ಕೊಂಡು ಅವರಿಗೆ ಶಾಪ ಕೊಟ್ಟನು. ತದನಂತರ ೧೦ ಸಾವಿರ ಶಿಪಾಯರ ಸಂಗಡ ಮಕ್ಕಕ್ಕೆ ವಿರೋಧವಾಗಿ ಹೋಗಿ ಯುದ್ಧ ಮಾಡಿ (೬೩೦ ಕ್ರಿಸ್ತಾಬ್ದ) ಅಬುಸೊಫಿಯಾನನನ್ನು ಹಿಡಿದು ಇಸ್ಲಾಮಿನಲ್ಲಿ ಶೇರಿಸಿ ಜಯೋತ್ಸವದಿಂದ ಪಟ್ಣದಲ್ಲಿ ಪ್ರವೇಶಿಸಿ ಕಾಬದಲ್ಲಿರುವ ಬೊಂಬೆಗಳನ್ನು ಮುರಿದು ಕಾಬವನ್ನು ಶುದ್ಧ ಮಾಡಿ ಸರ್ವಲೋಕದಲ್ಲಿಯೂ ಇದು ಶ್ರೇಷ್ಠವಾದ ದೇವಸ್ಥಾನ(ಪಳ್ಳಿ) ಎಂದು ಆಜ್ಞಾಪಿಸಿದನು. ಬೇರೆ ಅನೇಕ ಅರಬಿ ಕುಲಗಳನ್ನು ಯುದ್ಧದಲ್ಲಿ ಜೈಸಿ

ದೀನ್ ನಡಿಸಿದನು; ಆದರೂ ಅನೇಕ ಹೆಂಡರ ಕಲಹದ ನಿಮಿತ್ತ ಅವನಿಗೆ ಸುಖವು ಬರಲಿಲ್ಲ. ಒಬ್ಬ ಯೆಹೂದ ಸ್ತ್ರೀಯು ಕುರಿಯ ಮಾಂಸದಲ್ಲಿ ವಿಷವನ್ನು ಬೆರಸಿ ಕೊಟ್ಟದ್ದರಿಂದ, ಅವನಿಗೆ ಮದೀನದಲ್ಲಿ ಜ್ವರ ಹಿಡಿದು ಕಷ್ಟ ಪಟ್ಟು ಅತಿ ಪ್ರಿಯಳಾಗಿರುವ ಆಯಿಷ ಎಂಬವಳ ಮಡಿಯಲ್ಲಿ ತಲೆಯನ್ನು ಇಟ್ಟು—ಅಲ್ಲಾ! ನನ್ನ ಪಾಪಗಳನ್ನು ಕ್ಷಮಿಸು! ಇಗೋ, ನಾನು ಬರುತ್ತೇನೆಂದು ಹೇಳಿ ತೀರಿ ಹೋದನು. ೬೩೨ ಕ್ರಿಸ್ತಾಬ್ದ ೧೦ನೇ ಹಿಜಿರಾ.

೬. ಆಗ ಕರೇಜಿಳಲ್ಲಿ ಹುಟ್ಟಿದ ಪಾತಿಮ ಮಾತ್ರ ಮಕ್ಕಳಲ್ಲಿ ಉಳಿದದರಿಂದ, ಅವಳಿಗೂ ಅವಳ ಗಂಡನಾದ ಆಲಿಗೂ ಪ್ರವಾದಿಯ ಸರ್ವಬಾಧ್ಯತೆಯು ಶಿಕ್ಕಿತು. ಆದರೂ ಆಯಿಷ ಎಂಬವಳಿಗೆ ಪೂರ್ವಸಿದ್ಧಾಂತ ಇದ್ದದರಿಂದ, ಅವಳು ಉಪಾಯದಿಂದ ಅವನನ್ನು ತೆಗೆದು ತನ್ನ ತಂದೆಯಾದ ಅಬುಬೇಕರನಿಗೆ ಖಲೀಫ್‌ರಸೂಲ್ ಅಲ್ಲಾ ಎಂಬ ಸ್ಥಾನವೂ ಪಟ್ಟವೂ ಶಿಕ್ಕುವ ಹಾಗೆ ಮಾಡಿದಳು. ಆಗ ಮಹಮ್ಮದನ ಮರಣವನ್ನು ಕೇಳಿ ಅನೇಕ ಅರಬಿಯರು ಪೂರ್ವದ ವಿಗ್ರಹಗಳನ್ನು ಆರಾಧಿಸಲಿಕ್ಕೆ ತೊಡಗಿದಾಗ, ಅಬುಬೇಕರ್ ಅವರನ್ನು ತಗ್ಗಿಸಿ ಇಟ್ಟು, ಖುರಾನನ್ನು ೧೧೪ ಸೂರ(ಸಂಧಿ)ಗಳಾ

ಗಿ ಪೂರ್ತಿ ಮಾಡಿ ತೀರಿಸಿ, ಖಡ್ಗದಿಂದ ದೀನ್ ನಡಿಸಿದನು. ಅವನು ಸಹಾ (೬೩೪) ಸತ್ತಾಗ, ಆಯಿಷ ಎಂಬವಳು ನಬಿಯ ಮತ್ತೊಬ್ಬ ಹೆಂಡತಿಯ ತಂದೆಯಾದ ಓಮರನನ್ನು ಖಲೀಫ್‌ನಾಗ ಮಾಡಿದಳು. ಅವನು ಖುರಾನಿನ ಹೊರ್ತಾಗಿ ಇರುವ ಪುಸ್ತಕಗಳನ್ನೆಲ್ಲಾ ಸಟ್ಟು, ಬೂದಿಯಾಗ ಮಾಡಿದನು. ಉತ್ತರಪಶ್ಚಿಮದಲ್ಲಿರುವ ರೋಮಿಾಯರ ರಾಜ್ಯಗಳಲ್ಲಿ ಹಲವನ್ನು ಅರಬಿಯರ ಕೈವಶ ಮಾಡಿದನು. ಆಗ ಫಾರ್ಶಿ ರಾಜ್ಯವು ಪೂರ್ಣವಾಗಿ ವಶವಾಗಿ, ಸುರ್ಯರ ಮಾರ್ಗವು ನಾಶನವಾಗಿ, ಕೆಲವು ಫಾರ್ಶಿಗಳು ಮಾತ್ರ ಈಜೆಯ ತೀರಕ್ಕೆ ಬಂದು ವಾಸ ಮಾಡಿದ್ದಲ್ಲದೆ, ಬೇರೆ ಎಲ್ಲಾ ಫಾರ್ಶಿ ಯಾಜಕರು ಸಹಾ ಖಡ್ಗಕ್ಕೆ ಭಯ ಪಟ್ಟು, ಇಸ್ಲಾಮನ್ನು ಅನುಸರಿಸಿದರು.

೭. ಆದರೆ ಮುಸಲಮಾನರಲ್ಲಿ ಒಳ್ಳೇ ಐಕ್ಯವೂ ಉಂಟಾಗಿರಲಿಲ್ಲ. ಓಮರನು ಅವನ ತರುವಾಯ ಆಳಿದ ಉಸ್ಮಾನನೂ ಯುದ್ಧಗಳಲ್ಲಿ ಸತ್ತು ಹೋದರು. ಎಲ್ಲರಲ್ಲಿ ಹೆಚ್ಚು ಪ್ರಾಪ್ತಿಯುಳ್ಳ ಆಲಿಗೆ ಖಲೀಫ್ ಪಟ್ಟವು ಶಿಕ್ಕಿದಾಗ (೬೫೬), ಆಯಿಷ ಮೊದಲಾದವರು ಎದುರು ನಿಂತದರಿಂದ, ಕಠಿಣವಾದ ಯುದ್ಧ ಉಂಟಾಯಿತು. ಅದರಲ್ಲಿ ಆಲಿಯು ಜೈಸಿದನು.

ಆದರೂ ಬೇರೆ ಪ್ರಭುಗಳು ಸಮಾಧಾನದ ಭಾವವನ್ನು ತೋರಿಸಿ, ಖುರಾನನ್ನು ಕುರಿತು ಹೇಳಿ, ಮೋಸ ಮಾಡಿದರು. ಒಬ್ಬ ಕಳ್ಳನು ಆಲಿಯನ್ನು ತಿವಿದು, ಕೊಂದು ಹಾಕಿದನು. ಅವನಿಗೆ ಇಬ್ಬರು ಮಕ್ಕಳಿದ್ದರು. ಅವರಲ್ಲಿ ದೇವಭಕ್ತನಾದ ಹಸೇನನು ವಿಷದಿಂದ ತೀರಿ ಹೋದನು; ಹುಸೇನನು ಮೋಸದ ಯುದ್ಧದಲ್ಲಿ ಶಿಕ್ಕಿ ಬಿದ್ದು ಸತ್ತನು. ಆ ಕಾರಣದಿಂದ ಮುಸಲ್ಮಾನರೆಲ್ಲರು ಎರಡು ಪಕ್ಷದವರಾಗಿ ಹೋದರು. ಕೆಲವರು ಖುರಾನಿನ ಹೊರ್ತು ನಾಲ್ವರು ಖಲೀಫರು ಹೇಳಿ ಕೊಟ್ಟ ಸುನ್ನತುಬೋಧನೆಯನ್ನೂ, ಅಂದರೆ ಪಾರಂಪರ್ಯವಾದ ಬೋಧನೆಯನ್ನು ಇಸ್ಲಾಮುದವರಿಗೆ ಸರಿ ಕಂಡವರು ಖಲೀಫರ ಪಟ್ಟವನ್ನು ಹೊಂದ ಬೇಕೆಂಬದನ್ನೂ ಹಿಡಿದು ಕೊಳ್ಳುತ್ತಾರೆ. ಇವರಿಗೆ ಸುನ್ನಿತರೆಂಬ ಹೆಸರುಂಟು. ಬೇರೊಬ್ಬನು ಖುರಾನು ಮಾತ್ರ ಮುಖ್ಯವಾದದ್ದು, ಖುರಾನದ ಮಾತಿನ ಹೊರ್ತು ಪಾರಂಪರ್ಯವಾದ ಬೋಧನೆಯನ್ನು ಹಿಡಿಯ ಬಾರದು; ಆಲಿಯೂ ಪಾತಿಮಳ ಸಂತತಿಯೂ ಹೊರ್ತು, ನಬಿಗೆ ಉತ್ತರಾಧಿಕಾರಿಗಳು ಇಲ್ಲವೆಂದು ತರ್ಕಿಸಿ, ಮಹಮ್ಮದನಂತೆ ಆಲಿಯನ್ನೂ ಹನ್ನೆರಡು ಮಂದಿ ಇಮಾಮುರನ್ನೂ ಸನ್ಮಾನಿಸುತ್ತಾ ಬರ ಬೇಕೆಂದು ಬೋಧಿಸುವವರಾಗಿದ್ಧಾರೆ. ಇವರಿಗೆ

ಸೀಯಿತರೆಂಬ ಹೆಸರುಂಟು. ಹೀಗೆ ಎರಡಾಗಿ ಭಿನ್ನವಾದದ್ದ ಲ್ಲದೆ ಬೇರೆ ಬೇರೆ ಮತಭೇದಗಳು ಸಹಾ ಉಂಟಾದವು. ಮು ಸಲರ ಮರ್ಯಾದೆಯ ಪ್ರಕಾರ ಒಂದೊಂದು ನ್ಯಾಯವನ್ನು ದೃಢೀಕರಿಸುವದು ಅವಶ್ಯವಾದರೆ, ಆಯುಧವನ್ನು ಹಿಡಿದು ಕೊಳ್ಳುವದು ಸಹಾ ಮುಖ್ಯವಾಗಿ ಬೇಕಾಯಿತು.

ಇಸ್ಲಾಮದ ಪರೀಕ್ಷೆಯು.

೮. ಈಗ ಖುರಾನ ಉಪದೇಶವನ್ನು ಕುರಿತು ಕೆಲವು ನ್ಯಾಯಗಳನ್ನು ಹೇಳುವದುಂಟು. ಈ ಕನ್ನಡ ದೇಶದಲ್ಲಿರು ವ ಮುಸಲ್ಮಾನರು ಖುರಾನಿನ ಅರ್ಥವನ್ನು ಸ್ವಲ್ಪ ಮಾತ್ರ ತಿಳಿದು, ಒಂದೊಂದು ಕಾಲದಲ್ಲಿ ಉಂಟಾದ ಸುಳ್ಳು ಕಥೆಗ ಳನ್ನು ನಂಬುತ್ತಾ ಬರುತ್ತಾರೆ. ದೇವರು ತಿಳಿಸಿದ್ದನಲ್ಲದೆ ಮ ನುಷ್ಯರ ವಾಕ್ಯಗಳನ್ನು ವಿಶ್ವಾಸಿಸ ಬಾರದು. "ಉಪ್ಪು ಹು ಳಿ ಹಿಡಿದರೂ ಮಾಪಿಳ್ಳೆ ವಂಚಿಸುವನು" ಎಂಬ ಒಂದು ಗಾ ದೆ ಉಂಟಲ್ಲ? ಸತ್ಯವಂತರನ್ನು ಈ ಲೋಕದಲ್ಲಿ ನೋಡು ವದು ಬಹು ದುರ್ಲಭವಾಗಿದೆ. ಆದರೂ ಮಾಪಿಳ್ಳೆಯರು ಒಂದೊಂದು ಸಂಗತಿಯನ್ನು ಓದುವಾಗ, ಸತ್ಯವೋ ಮಿಥ್ಯ ವೋ ಎಂದು ವಿಚಾರಣೆ ಮಾಡದೆ, ಪೂರ್ವದಲ್ಲಿ ಉಂಟಾದ

ಹಾಡೆಂದು ಶಾಸ್ತ್ರಿಗಳು ಓದುವದರಿಂದ, ಸುಳ್ಳಾಗಿರ ಕೂಡದೆಂದು ವೃಥಾ ಸ್ಥಾಪಿಸುತ್ತಾರೆ. ಅಯ್ಯೋ! ಮನುಷ್ಯನ ಮಾತಿಗೂ ದೇವವಾಕ್ಯಕ್ಕೂ ಎಷ್ಟು ದೊಡ್ಡ ಹೆಚ್ಚು ಕಡಿಮೆಯುಂಟು! ಮನುಷ್ಯವಾಕ್ಯವು ಹೊಟ್ಟಾಗಿದೆ; ದೇವರ ವಾಕ್ಯವು ಕಾಳಾಗಿದೆ. ಹೊಟ್ಟು ಮತ್ತು ಕಾಳು ಬೆರಿಕೆಯಾಗಬೇಕೋ? ಯೇಸು ಮರಿಯಳ ತೊಡೆಯಿಂದ ಹುಟ್ಟಿದನೆಂದು ಮಾಪಿಳ್ಳೆಯರು ಹೇಳುವದು ಖುರಾನದ ಒಂದು ಸ್ಥಳದಲ್ಲಿಯಾದರೂ ಕಾಣುವದಿಲ್ಲ; ಆದರೆ ಅದು ಎಲ್ಲರಿಗೆ ಒಪ್ಪಿತವಾದ ಮಾತಾಗಿದೆ. ಮಹಮ್ಮದನಿಗೆ ಪರದಲ್ಲಿ ಮರಿಯಮ್ಮನ ಸಂಗಡ ಒಂದು ಮದುವೆಯು ಆಗುವದೆಂಬ ಶೃತಿಯು ಎಲ್ಲಿಯೂ ಹಬ್ಬಿ ಇರುತ್ತದೆ; ಆದರೆ ಇದು ಸಹಾ ಮೋಸಗಾರರ ಮಾತಾಗಿದೆ. ಖುರಾನದ ಒಂದು ಸಂಧಿ (ಸೂರದಲ್ಲಿ) ಎಲ್ಲಿಯೂ ಈ ಮಾತಿನ ನೆರಳಾದರೂ ಕಾಣುವದಿಲ್ಲ. ಮಹಮ್ಮದನು ಚಂದ್ರನನ್ನು ಎರಡಾಗಿ ಶೀಳಿದನೆಂದೂ ಅನೇಕ ಅದ್ಭುತಕಾರ್ಯಗಳನ್ನು ಮಾಡಿದನೆಂದೂ ಮಾಪಿಳ್ಳೆಯರು ಹೇಳುವ ಮಾತು ಅವರ ವೇದದಲ್ಲಿ ಹೇಳಿರುವದಿಲ್ಲ. ೫೪ನೇ ಸೂರದಲ್ಲಿ, ಅಲ್ಲಾ ಅಂತ್ಯ ದಿವಸಲ್ಲಿ ನ್ಯಾಯ ತೀರಿಸಲಿಕ್ಕೆ ಬರುತ್ತಾನೆಂದು ವಿವರಿಸಿ ಇರುವ ಸ್ಥಳದ

ಲ್ಲಿ ಆ ಘಳಿಗೆಯು ಬಂತು. ಚಂದ್ರನು ಎರಡಾಗಿ ವಿಭಾಗಿಸ ಲ್ಪಟ್ಟದನ್ನು ನೋಡುತ್ತಾರೆಂಬ ಮಾತು ಮಾತ್ರ ಉಂಟು. ಆ ದೇ ಅಂತ್ಯದಿವಸದ ಒಂದು ಗುರ್ತಾಗಿರುವದು ಎಂಬದು ಪ್ರವಾದಿಯ ಆಲೋಚನೆಯಾಗಿದೆ. ಮುಸಲ್ಮಾನರು ಖುರಾ ನದಲ್ಲಿ ಎಷ್ಟು ಹುಡುಕಿ ನೋಡಿದರೂ, ಮಹಮ್ಮದನು ಮಾ ಡಿದ ಅದ್ಭುತಗಳು ಒಂದಾದರೂ ಕಾಣದೆ ಇರುವದರಿಂದ, ಈ ಒಂದು ವಾಕ್ಯದ ಅರ್ಥವನ್ನು ಬದಲಾಯಿಸಿ ಮಹಮ್ಮ ದನು ಚಂದ್ರನನ್ನು ವಿಭಾಗಿಸಿದ ಪ್ರಕಾರ, ಒಂದು ಕಥೆಯ ನ್ನು ಕಲ್ಪನೆ ಮಾಡಿದ್ಧಾರೆ. ಅರಬಿ ಭಾಷೆಯು ಚನ್ನಾಗಿ ಬಾರದೆ ಇದ್ದದರಿಂದ, ಹೀಗೆ ಒಂದೊಂದನ್ನು ಕದ್ದು ಕೊಂ ಡು ಶೇರಿಸಿ ಕೊಂಡಿದ್ಧಾರೆ. ಆಲಿಯು ಎಲ್ಲರಲ್ಲಿ ಬಲಿಷ್ಠನಾ ಗಿ ಇದ್ದದರಿಂದ, ಪ್ರವಾದಿಯು ಅವನಿಗೆ ಅಲ್ಲನ ಸಿಂಹವೆಂ ದು ಹೆಸರಿಟ್ಟಿದ್ಧಾನೆ. ಮಾಪಿಳ್ಳೆಯರು ಇದರ ಅರ್ಥವನ್ನು ತಿಳಿಯದೆ ಆಲಿಗೆ ಮುಂಚೆ ಸಿಂಹದ ಜನ್ಮವಿತ್ತೆಂದೂ, ತರು ವಾಯ ನಬಿಯು ಅವನನ್ನು ಮನುಷ್ಯನಾಗ ಮಾಡಿದನೆಂ ದೂ, ಹೀಗೆ ಸುಮ್ಮನೆ ಮೂರ್ತಿಸೇವೆ ಮಾಡುವವರಂತೆ ಅ ನೇಕ ಸುಳ್ಳು ಕಥೆಗಳನ್ನು ರಚಿಸಿ, ಸಂತೋಷ ಪಡುತ್ತಾರೆ. ಮಹಮ್ಮದನು ತಾನೇ ಹೇಳುವದೇನಂದರೆ—ನಾನು ಒಂದು

ಅದ್ಭುತವನ್ನಾದರೂ ಮಾಡಲಿಲ್ಲ, ಮಾಡಲಿಕ್ಕೂ ಇಲ್ಲ; ನೀನು ಪ್ರಸಂಗಿಯಾಗಿ ಕಳುಹಿಸಲ್ಪಟ್ಟದ್ಧಿಯೇ ಹೊರ್ತು ಅದ್ಭುತಗಳನ್ನು ಮಾಡಲಿಕ್ಕಲ್ಲ. ಮತ್ತು ಅವನು ಬೇರೊಂದು ಸ್ಥಳದಲ್ಲಿ ಹೇಳುವದೇನಂದರೆ—ಅದ್ಭುತಗಳು ದೇವರ ಬಲದಲ್ಲಿ ಮಾತ್ರ ಅವೆ; ನಾನು ಬಹಿರಂಗವಾದ ಪ್ರವಾದಿಯೇ ಹೊರ್ತು ಬೇರೇನು ಅಲ್ಲ. ಮುಂಚೆ ಇದ್ದ ಪ್ರವಾದಿಗಳು ಲಕ್ಷಣಗಳನ್ನು ತೋರಿಸಿದಾಗ, ಜನರು ಲಕ್ಷವಿಡದೆ, ಅವರನ್ನು ವಂಚಕರೆಂದು ಕರೆದರಲ್ಲ? ಯೇಸು ಸತ್ತವರನ್ನು ಎಬ್ಬಿಸಿದರೂ, ನಿನಗೆ ಪಿಶಾಚ ಉಂಟೆಂದೂ, ನೀನು ಮಂತ್ರವಾದಿ ಎಂದೂ ಯೆಹೂದ್ಯರು ದೂಷಿಸಿದರಲ್ಲ? ನಾನು ಖುರಾನನ್ನು ತಿಳಿಸಿದರೆ ಸಾಕು ಎಂದು ೬, ೧೩, ೧೭, ೨೯ನೆ ಸೂರಗಳಲ್ಲಿ ಹೇಳಿದ್ಧಾನೆ. ಆದದರಿಂದ ಖುರಾನನ್ನು ತಿಳಿಯದ ಮಹಮ್ಮದಿಯರು ಮಹಮ್ಮದನು ಅದ್ಭುತಕಾರ್ಯಗಳನ್ನು ಮಾಡಿದನೆಂದು ಸುಮ್ಮನೆ ಹೇಳುತ್ತಾರೆ.

ಇಂಥಾ ಮಾತುಗಳು ಖುರಾನದಲ್ಲಿ ಬಹಳವಾಗಿ ಇದ್ದರೂ, ಮಾಪಿಳ್ಳೆಯರು ಅವುಗಳನ್ನು ಲಕ್ಷಿಸುವದೇ ಇಲ್ಲ. ಮಹಮ್ಮದಿಯರು ಸತ್ಯವನ್ನು ತಿಳಿಯ ಮನಸ್ಸಾಗಿದ್ದರೆ, ಮುಂಚಿತವಾಗಿಯೇ ಖುರಾನದಲ್ಲಿ ಕಾಣದಂಥಾದ್ದು ಸುಳ್ಳು

ಮಾತೆಂದು ನೆನಸಿ ಬಿಟ್ಟು ಬಿಡ ಬೇಕು; ಆದರೆ ತಮ್ಮ ಮತಕ್ಕೆ ತಾಯಿಯಾದ ಖುರಾನದ ಗುಣದೋಷಗಳನ್ನು ಕ್ರಮೇಣ ತಿಳಿದು ಕೊಳ್ಳ ಬಹುದು. ಪಾಪಿಯಾದ ನನಗೆ ಸತ್ಯವನ್ನು ತಿಳಿಸು! ನೀನು ತೋರಿಸುವ ದಾರಿಯಲ್ಲಿ ನಾನು ನಡಿಯುವೆನು; ದಾರಿಯನ್ನು ಮಾತ್ರ ತೋರಿಸೆಂದು ದೇವರಿಗೆ ಪ್ರಾರ್ಥನೆ ಮಾಡಿದರೆ, ಖುರಾನು ದೇವರ ವಾಕ್ಯವಲ್ಲವೆಂದು ತಿಳಿದು ಕೊಳ್ಳ ಬಹುದು.

೯. ಅದು ಹ್ಯಾಗಂದರೆ, ಮುಹಮ್ಮದನು ದೇವರನ್ನು ವರ್ಣಿಸುವಾಗ, ಅನೇಕ ದೊಡ್ಡ ಮಾತುಗಳನ್ನು ಹೇಳಿದನು. ಆದರೆ ಅವುಗಳನ್ನೆಲ್ಲಾ ಸೂಕ್ಷ್ಮವಾಗಿ ನೋಡಿದರೆ, ತೌರೆತಿನಿಂದ (ಮೋಶೆಯ ಪಂಚಗ್ರಂಥ) ತೆಗದದ್ದು ಎಂದು ನಿಶ್ಚೈಸ ಬಹುದು. ಅಲ್ಲ ನಿರ್ಮಾಣಿಕನೂ ಒಡೆಯನೂ ದೊಡ್ಡವನೂ ಸರ್ವಶಕ್ತನೂ ತನ್ನ ಚಿತ್ತದ ಪ್ರಕಾರ ನಡಿಸುವವನೂ ಅಗೋಚರನೂ ಎಂಬದು ನಿಜವೇ. ಅದು ತೌರೆತಿನಲ್ಲಿಯೂ ಸಬೂರಿನಲ್ಲಿಯೂ (ಕೀರ್ತನೆಗಳು ಮೊದಲಾದ ದೇವವಾಕ್ಯದ ಗ್ರಂಥಗಳು) ಅತಿ ಸ್ಪಷ್ಟವಾಗಿ ತೋರಿಸಿಯದೆ. ಆದರೂ ದೇವರು ದೊಡ್ಡವನು ಎಂಬದು ಮಾತ್ರವಲ್ಲ, ಸಣ್ಣದರ ಸಂಗಡ ಕೂಡಿ ಇರುವವನೂ, ಮನುಷ್ಯರಿಗೆ ಸಮಿಾಪವಾದವನೂ

ಆಗಿದ್ದಾನೆ ಎಂಬದನ್ನು ಮಹಮ್ಮದನು ಗ್ರಹಿಸಿ ಕೊಳ್ಳಲಿಲ್ಲ. ದೇವರಿಂದ ಬಂದ ತೌರೆತು ಸಬೂರು ಇಂಜೀಲು ಇವುಗಳನ್ನು ನೋಡಿದರೆ, ದೇವರನ್ನು ಕುರಿತು ಖುರಾನದಲ್ಲಿ ವರ್ಣಿಸಿರುವಂಥಾದ್ದು ಸಾಲದೆಂದು ಕಾಣುವದು. ದೇವರಲ್ಲಿ ಬಲವೂ ದೊಡ್ಡತನವೂ ಅಲ್ಲ, ಪ್ರೀತಿಯೂ ಪರಿಶುದ್ಧತ್ವವೂ ಮುಖ್ಯವಾದ ಗುಣಗಳಾಗಿವೆ. ತಾನು ಉಂಟು ಮಾಡಿದ ಎಲ್ಲವುಗಳಿಗೆ ಒಳ್ಳೇದಾಗ ಬೇಕೆಂದು ನೆನಸುತ್ತಾನೆ. ಆದದರಿಂದ ಪಾಪಿಗಳಿಗೂ ಬಹು ದಯಾಳು ಆಗಿದ್ದಾನೆ. ದೇವರು ಹ್ಯಾಗೆ ಪ್ರೀತಿಯುಳ್ಳವನಾಗಿದ್ದಾನೋ ಹಾಗಿಯೇ ಪರಿಶುದ್ಧತ್ವವೂ ಸತ್ಯವೂ ಉಳ್ಳವನಾಗಿದ್ದಾನೆ, ಮತ್ತು ಪಾಪವನ್ನು ಪೂರ್ಣವಾಗಿ ಅಸಹ್ಯಿಸುತ್ತಾನೆ; ತನ್ನ ಪರಿಶುದ್ಧತ್ವಕ್ಕೆ ತಕ್ಕಹಾಗೆ ಹೊಸ ಸ್ವಭಾವವನ್ನು ಧರಿಸಿ ಕೊಂಡ ಮನುಷ್ಯರು ಮಾತ್ರವೇ ಅವನ ಮುಖವನ್ನು ನೋಡ ಬಹುದು. ಆದದರಿಂದ ಕ್ರೈಸ್ತರಿಗೆ ದೇವರ ಕರುಣೆಯು ಅತಿ ಅವಶ್ಯವಾಗಿದೆ. ಇದನ್ನು ತಾಳ್ಮೆಯಿಂದ ಬೇಡುವವರೆಲ್ಲರು ಹೊಂದುತ್ತಾರೆ ಇದರಿಂದ ಪಾಪದ ಸಂಕಷ್ಟವು ಮುಗಿಯುವದೆಂಬ ನಿಶ್ಚಯವು ಇರುತ್ತದೆ. ಆದರೆ ಖುರಾನದ ದೇವರು ಹಾಗಲ್ಲ, ಆ ಖುರಾನದ ಕೆಲವು ಸೂರಗಳನ್ನು ಓದಿದರೆ ಮಾತ್ರ, ಸಂಗಡಲೇ

ನೂರು ಪಾಪಗಳನ್ನು ಕ್ಷಮಿಸುವನೆಂದು ಒಂದು ಸ್ಥಳದಲ್ಲಿ ಹೇಳಿಯದೆ. ಹಾಗಿದ್ದರೆ ದೇವರಿಗೆ ನ್ಯಾಯವಿಲ್ಲವೆಂಬ ಅಪವಾದವು ಹತ್ತುವದು.

ಮತ್ತು ಅಲ್ಲ ಅನೇಕ ಮನುಷ್ಯರನ್ನು ಜಿನ್ನುಗಳನ್ನು (ಪಿಶಾಚಿ) ನರಕವನ್ನು ತುಂಬಿಸುವದಕ್ಕಾಗಿ ಉಂಟು ಮಾಡಿದನೆಂದು ೭ನೇ ಸೂರದಲ್ಲಿ ಹೇಳಿರುವದರಿಂದ, ದೇವರು ದಯವಿಲ್ಲದವನೆಂದಾಯಿತು.

ಅಲ್ಲ ಕೆಲವರಿಂದ ಒಳ್ಳೇದನ್ನು ಮಾಡಿಸುತ್ತಾನೆಂದೂ, ಲೋಕದಲ್ಲಿ ನಡಿಯುವ ಒಂದೊಂದು ಕಾರ್ಯವೂ ಮನುಷ್ಯನ ಒಂದೊಂದು ಕ್ರಿಯೆಯೂ ಸಂಭವಿಸುವದಕ್ಕಿಂತ ಮುಂಚೆಯೇ ಅಲ್ಲನಿಂದ ವಿಧಿಸಲ್ಪಟ್ಟದೆಂದೂ, ಈ ಲೋಕದಲ್ಲಿ ನಡಿಯುವ ಒಂದೊಂದು ಕಾರ್ಯವು ಒಳ್ಳೇಯವುಗಳೂ ಕೆಟ್ಟವುಗಳೂ ಬದಲಾಗದ ಹಾಗೆ ನೇಮಿಸಲ್ಪಟ್ಟವೆ ಎಂದೂ, ಅನಾದಿಯಿಂದ ಕಾಪಾಡಲ್ಪಟ್ಟಿರುವಂಥ ಹಲಿಗೆಯಲ್ಲಿ ಬರಿಯಲ್ಪಟ್ಟವೆ ಎಂದೂ, ಎಲ್ಲಾ ಕಾರ್ಯಗಳ ನಿರ್ಣಯಗಳು ಅಡಕವಾಗಿರುವ ಪುಸ್ತಕದಲ್ಲಿ ಬರಿಯಲ್ಪಟ್ಟಿರುವ ಪ್ರಕಾರವೇ ದೇವರ ಅಪ್ಪಣೆ ಇಲ್ಲದೆ ಒಂದು ಆತ್ಮವಾದರೂ ಸಾಯ ಕೂಡದೆಂಬದೂ, ಎಲ್ಲಾ ತಲೆಬರಹದ ಪ್ರಕಾರ ಸಂಭವಿಸುತ್ತದೆಂದೂ,

ಒಳ್ಳೇದನ್ನು ಯೋಚಿಸುವದೂ ಕೇಡನ್ನು ಮಾಡ ನಿರೂಪಿ
ಸುವದೂ ಎಲ್ಲಾ ಅದೃಷ್ಟದಂತೆ ನಡಿಯುತ್ತದೆ ಎಂಬೀ ಮಾ
ತುಗಳನ್ನು (ಸೂರ ೬) ಆಲೋಚಿಸಿದರೆ, ೫ ಸಾರಿಯ ನ
ಮಸ್ಕಾರವೂ ಉಪವಾಸವೂ ಧರ್ಮವೂ ಯಾತ್ರೆಯೂ ಯಾ
ವ ಪ್ರಯೋಜನಕ್ಕೂ ಬಾರದೆಂದು ತಿಳಿಯ ಬಹುದು. ವಿ
ಧಿಯ ವಿವರವನ್ನು ಬರದ ಕಲ್ಲಿನ ಹಲಿಗೆಯಂತೆ ಅಲ್ಲ ಜೀ
ವವಿಲ್ಲದ ದೇವರೆಂದು ಹೇಳ ಬೇಕಲ್ಲ? ಅಲ್ಲ ಅಕ್ಬರ್ ಎಂ
ದೂ ಅಲ್ಲ ಮದೂಲಿಲ್ಲ ಎಂದೂ ಜಪಿಸಿದರೆ ಸಾಕಾದೀತೇ?

೧೦. ಮಹಮ್ಮದನು ತಾನು ಅರಬಿ ಬರಹವನ್ನು ಸ
ಹಾ ತಿಳಿಯದವನಾಗಿರುವದರಿಂದ, ಬೇರೆ ವೇದಗಳನ್ನಾಗ
ಲೀ ಶಾಸ್ತ್ರಗಳನ್ನಾಗಲೀ ಸ್ವಲ್ಪವಾದರೂ ನೋಡಲಿಕ್ಕೆ ಅವನಿ
ಗೆ ಅನುಕೂಲ ಉಂಟಾಗಿರಲಿಲ್ಲ. ಅವನು ತೌರೆತು ಮೊದ
ಲಾದ ವೇದಗಳನ್ನು ನೋಡಲಿಲ್ಲ. ಯಾರಾದರೂ ಅಂಗಡಿ
ಯಲ್ಲಿ ಮಾತಾಡುವದನ್ನು ಕೇಳಿದದರಿಂದಲೇ ಕೆಲವು ಕಥೆ
ಗಳನ್ನು ಸತ್ಯಾಸತ್ಯಗಳನ್ನು ಬೆರಿಕೆ ಮಾಡಿ ಬರೆಸಿದ್ಧಾನೆ.
ಅಬ್ರಹಾಮ ಮೋಶೆ ದಾವೀದ್ ಯೋಹಾನ್ ಯೇಸು
ಮೊದಲಾದವರು ನಬಿಗಳು ಎಂದೂ, ಇವರಲ್ಲಿ ಒಬ್ಬನನ್ನು
ಮಾತ್ರ ಯಾರಾದರೂ ತುಛೀಕರಿಸಿದರೆ ಮುಕ್ತರಲ್ಲಿ ಶೇರು

ವವನಲ್ಲ ಎಂದೂ ಹೇಳಿದಾಗ್ಯೂ, ಮುಸಲ್ಮಾನರೆಲ್ಲರು ಇವರ ಹೆಸರುಗಳನ್ನು ಮಾತ್ರವೇ ಸನ್ಮಾನಿಸುತ್ತಾರಲ್ಲದೆ, ಅವರ ವರ್ತಮಾನಗಳನ್ನೂ ಮಾತುಗಳನ್ನೂ ಏನೂ ಮನಸ್ಸಿಗೆ ತಾರದೆ ಇರುವದರಿಂದ, ಮುಕ್ತರಲ್ಲವೆಂದು ಕಾಣುತ್ತದೆ. ತೌರೆತನ್ನಾದರೂ ಇಂಜಿಲ್ಲನ್ನಾದರೂ ಯಾರೂ ನೋಡುವದಿಲ್ಲ, ತಮಗೆ ಉಂಟೆಂದೂ ಎಲ್ಲಾ ಬಲ್ಲೆವೆಂದೂ ಕ್ರೈಸ್ತರು ವೇದವನ್ನು ತಿದ್ದಿದ್ಧಾರೆ ಎಂದೂ ಸುಮ್ಮನೆ ವಾದಿಸುತ್ತಾರಲ್ಲದೆ, ಇಂಥಾ ಪುಸ್ತಕದಲ್ಲಿ, ಇಂಥಾ ಸಂಧಿಯಲ್ಲಿ, ಇಲ್ಲವೆ ಇಂಥಾ ವಚನದಲ್ಲಿ ಉಂಟೆಂದು ಅವರ ಮುಲ್ಲ ಎಂಬವರು ಯಾರಿಗೂ ತೋರಿಸಿ ಕೊಡ ಶಕ್ತರಾಗಿರುವದಿಲ್ಲ. ತಿಳುವಿಕೆಯು ವೃದ್ಧಿಯಾಗದ ಹಾಗೆ, ಅಹಂಭಾವವು ಅಡ್ಡಿ ಮಾಡುತ್ತದೆ. ೫೦, ೧೦೦ ವರುಷಗಳ ಮುಂಚೆ ನಡದು ಬಂದ ತಿಳುವಿಕೆಯನ್ನು ಅವರು ಮರತು ಬಿಟ್ಟರಲ್ಲದೆ, ಹೊಸತೇನೂ ತಿಳಿದು ಕೊಳ್ಳಲಿಲ್ಲ. ಇಸ್ಲಾಮಿನ ಮನಸ್ಸು ಬಂಜರು ಸ್ಥಳದಂತೆ ಖಾಲಿಯಾಗಿ ಬಿದ್ದದೆ. ಖುರಾನನ್ನು ಮುಲ್ಲ ಎಂಬವರಲ್ಲದೆ ಯಾರೂ ಓದ ಬಾರದೆಂದೂ, ಅರಬಿ ಭಾಷೆಯ ಹೊರ್ತು ಬೇರೆ ಭಾಷೆಯಲ್ಲಿ ಹೇಳ ಬಾರದೆಂದೂ ಅಪ್ಪಣೆ ಕೊಟ್ಟದ್ದು ಅದರದರ ಗುಣಾವಗುಣಗಳನ್ನು ತಿಳಿಸದೆ ಅಡಗಿಸಿಡುವದಕ್ಕೆ ಮಾತ್ರ ಆಗಿರುತ್ತದೆ

ಎಂಬದು ಸಿದ್ಧಾಂತವಾಗಿದೆ. ಆದರೆ ದೇವರ ವಾಕ್ಯವು ಹಾಗಲ್ಲ, ಎಲ್ಲರಿಗೆ ಓದುವದಕ್ಕಾಗಿಯೇ ಬರಿಯಲ್ಪಟ್ಟಿರುತ್ತದೆ. ಅದನ್ನು ತಿರಸ್ಕರಿಸಿದರೂ, ಹಾಸ್ಯ ಮಾಡಿದರೂ, ಶುದ್ಧ ಮಾತುಗಳಿಗಲ್ಲ, ದೂಷಿಸುವವರಿಗೆ ಮಾತ್ರ ಕೊರತೆಯು ಹತ್ತುತ್ತದೆ. ಖುರಾನನ್ನು ಚನ್ನಾಗಿ ಓದಿದರೆ, ಮಾತುಗಳು ಬಹಳ, ಅರ್ಥವು ಸ್ವಲ್ಪವೆಂದು ಪ್ರತ್ಯಕ್ಷವಾಗಿದೆ. ಒಂದೊಂದು ಕಾರ್ಯವನ್ನು ಮನಸ್ಸಿಗೆ ಬೇಸರ ಹತ್ತುವಷ್ಟು ಸಾರಿ ತಿರುಗಿ ತಿರುಗಿ ಹೇಳಿರುತ್ತದೆ. ವಿರೋಧವೂ ಬೀಳುವಿಕೆಯೂ ಬಹಳ ಉಂಟು. ದೇವರ ಸತ್ಯ ಪ್ರವಾದಿಗಳು ಆ ಪ್ರಕಾರ ಹೇಳುವದಿಲ್ಲವಲ್ಲ? ತೌರೆತು ಸಬೂರು ಇಂಜಿಲ್ ಈ ಮೂರನ್ನು ನೋಡಿದರೆ, ಇದರ ಸತ್ಯವು ಪ್ರತ್ಯಕ್ಷವಾಗುವದು.

೧೧. ಯೇಸು ಹೇಳಿದ ವಚನಗಳಲ್ಲಿ ತನ್ನ ತರುವಾಯ ಮಹಮ್ಮದನು ಬರುವನೆಂಬ ಒಂದು ಮಾತು ಅದೆ ಎಂತ ಖುರಾನಿನಲ್ಲಿ ಉಂಟು. ಇದರಲ್ಲಿ ಸ್ವಲ್ಪ ಸತ್ಯ ಅದೆ. ಸತ್ಯ ಪ್ರವಾದಿಗಳೆಲ್ಲರೂ ಬರುವಂಥಾ ಕಾರ್ಯಗಳನ್ನು ಬಹಳ ತಿಳಿಸಿರುತ್ತಾರೆ. ಅವರು ತಿಳಿಸಿದ ಪ್ರಕಾರವೇ ಎಲ್ಲಾ ನೆರವೇರಿತು. ತನ್ನ ತರುವಾಯ ನಡಿಯ ಬೇಕಾದ ಒಂದು ಕಾರ್ಯವನ್ನಾದರೂ, ಮಹಮ್ಮದನು ತಿಳಿಸಿ ಇರುವದಿಲ್ಲ. ಯೇಸು

ಅನೇಕ ಸಾರಿ ತಿಳಿಸಿದ್ದೇನಂದರೆ—ನಾನು ನನ್ನ ಹೆಸರನ್ನಲ್ಲ, ತಂದೆಯ ಹೆಸರನ್ನು ಹೇಳಿ ಅವನ ಮಹಿಮೆಯನ್ನು ಮಾತ್ರವೇ ಆಶಿಸಿ ತಾಳ್ಮೆಯಿಂದ ಬಂದಿರುವದರಿಂದ, ನೀವು ನನ್ನನ್ನು ಅಂಗೀಕರಿಸುವದಿಲ್ಲ; ನನ್ನ ತರುವಾಯ ಅನೇಕರು ತಮ್ಮ ತಮ್ಮ ಹೆಸರುಗಳನ್ನು ಹೇಳಿ, ಅಹಂಭಾವದ ಮಾತುಗಳನ್ನಾಡಿ, ತಮ್ಮನ್ನೇ ದೊಡ್ಡವರಾಗ ಮಾಡಿ ಕೊಳ್ಳುವರು! ಈ ವಿಧದ ವಂಚಕರಿಗೆ ಲೋಕವು ಕಿವಿ ಕೊಡುವದು! ಹೀಗೆ ಹೇಳಿದ ಪ್ರಕಾರವೇ ಸಂಭವಿಸಿತಲ್ಲ? ಕೆಲವು ಮುಸಲ್ಮಾನರು ಹಾಗಲ್ಲ, ಯೇಸು ತನ್ನ ಶಿಷ್ಯರಿಗೆ—ನಿಮಗೆ ಆದರಣೆಯನ್ನು ಕೊಟ್ಟು ಸಕಲ ಸತ್ಯವನ್ನೂ ತೋರಿಸುವಂಥ ಪರಿಶುದ್ಧಾತ್ಮವನ್ನು ನಾನು ಕಳುಹಿಸಿ ಕೊಡುವೆನೆಂದು ಅಪ್ಪಣೆ ಕೊಟ್ಟಿದ್ಧಾನಲ್ಲ? ಎಂದು ವಾದಿಸುತ್ತಾರೆ. ಅದು ಸತ್ಯವೇ. ಯೋಹಾನನ ಸುವಾರ್ತೆಯ ೧೪ನೇ ಸಂಧಿ ೧೬ನೇ ವಚನದಲ್ಲಿ, ಯೇಸು ಪರಲೋಕಕ್ಕೆ ಏರಿ ಹೋದ ೧೦ನೇ ದಿವಸದಲ್ಲಿ ಆ ಪರಿಶುದ್ಧಾತ್ಮವನ್ನು ತನ್ನ ಶಿಷ್ಯರ ಮೇಲೆ ಇಳಿದು ಬರ ಮಾಡಿದ್ಧಾನೆ. ಆ ಆತ್ಮವು ಎಂದಿಗೂ ತನ್ನ ವಿಶ್ವಾಸಿಗಳ ಹೃದಯಲ್ಲಿ ನಿವಾಸಿಸುವದೆಂದು, ಅವನು ತನ್ನ ಸ್ವಂತವಾದದರಿಂದ ಒಂದನ್ನಾದರೂ ಹೇಳದೆ, ಯೇಸುವಿನ ವಾಕ್ಯಗಳನ್ನೆಲಾ ನೆನಪಿಗೆ ತಂದು, ಅ

ವನಿಗೆ ಸಾಕ್ಷಿಯಾಗಿ ನಿಂತಿರುವದೆಂದು ತಿಳಿಸಿರುವ ಕಾರಣ, ಈ ಆತ್ಮವು ಮುಹಮ್ಮದನಲ್ಲವೆಂದು ಸ್ಪಷ್ಟವಾಗಿ ಕಾಣುತ್ತದೆ. ಮುಹಮ್ಮದನು ಯಾವಾಗಲೂ ಭೂಮಿಯಲ್ಲಿ ವಾಸ ಮಾಡಲಿಲ್ಲವಲ್ಲ? ಮತ್ತು ಯೇಸುವಿನ ವಾಕ್ಯಗಳನ್ನಲ್ಲ, ಸ್ವಂತ ಮಾತುಗಳನ್ನೇ ಕಲಿಸಿರುತ್ತಾನೆ. ಆ ಸತ್ಯದ ಆತ್ಮವು ಯೇಸುವಿನ ನಿಜವಿಶ್ವಾಸಿಗಳಲ್ಲಿ ಈ ದಿವಸದ ವರೆಗೂ ವಾಸ ಮಾಡುತ್ತದೆ. ಲೋಕದವರಿಗೆ ಮಾತ್ರ ಅವನನ್ನು ಅಂಗೀಕರಿಸಲಿಕ್ಕೂ ತಿಳಿಯಲಿಕ್ಕೂ ಕೂಡದೆಂದು ಯೇಸು ತಾನೇ ಹೇಳಿದ್ಧಾನೆ.

೧೨. ಮುಹಮ್ಮದನಿಗೆ ಆ ಪರಿಶುದ್ಧಾತ್ಮನು ಬರಲಿಲ್ಲ. ಅವನು ತಾನೇ ಹೇಳಿದ್ದು — ಈ ಲೋಕದಲ್ಲಿ ನನಗೆ ಅತಿ ಅವಶ್ಯವಾದದ್ದು ಸ್ತ್ರೀಯರೂ ಸುಗಂಧ ವಸ್ತುಗಳೂ ಮಾತ್ರವೇ ಆಗಿವೆ; ಈ ಎರಡು ಮಾತ್ರವೇ ನನ್ನ ಕಣ್ಣಿಗೆ ಸಂತೋಷ ಉಂಟು ಮಾಡುತ್ತವೆ, ಪ್ರಾರ್ಥಿಸುವಾಗ ನನ್ನ ಭಕ್ತಿಯನ್ನು ಹೆಚ್ಚಿಸುತ್ತವೆ. ಈಗ ಹೇಳಿದ ಮಾತು ವಿಚಿತ್ರವಾಗಿ ಕಾಣುತ್ತದೆ. ಹೆಂಡರೆಲ್ಲರಲ್ಲಿ ದುಷ್ಟಳಾದ ಆಯಿಷ ಎಂಬವಳನ್ನು ನಬಿಯು ಹೆಚ್ಚು ಪ್ರೀತಿ ಮಾಡಿದದರಿಂದ, ಕುರುಡನಾಗಿ ಹೋದನು. ಜೈದ್ ಎಂಬವನು ತನಗೆ ದತ್ತಪುತ್ರನಾದಾಗ,

ಒಂದು ದಿವಸ ಅವನ ಮನೆಗೆ ಹೋಗಿ ಅವನ ಹೆಂಡತಿಯಾದ ಸೇನಿಬಳನ್ನು ನೋಡಿ ಮೋಹಗೊಂಡು ಅವಳನ್ನು ಬಹಳವಾಗಿ ನಿರ್ಬಂಧಿಸಿದದರಿಂದ, ಜೈದ್ ಎಂಬವನು ಹೆದರಿ, ಅವಳನ್ನು ಮಹಮ್ಮದನಿಗೆ ಒಪ್ಪಿಸಿ ಕೊಟ್ಟಾಗ, ಮಹಮ್ಮದನು--ದೇವರಿಗೆ ಸ್ತೋತ್ರವಾಗಲಿ, ಅವನು ಮಾತ್ರವೇ ಮನುಷ್ಯರ ಹೃದಯಗಳನ್ನು ತನ್ನ ಚಿತ್ತದ ಪ್ರಕಾರ ನಡಿಸುತ್ತಾನೆಂದು, ಅವಳ ಕೈ ಹಿಡಿದು ಹೇಳಿದನು. ಅದನ್ನು ಅವನ ಶಿಷ್ಯರು ಕೇಳಿ, ಮನಸ್ಸಿನಲ್ಲಿ ದುಃಖಿತರಾಗಿರುವದನ್ನು ಪ್ರವಾದಿಯು ನೋಡಿ (೩೩ ಸೂರ) ಗಬ್ರಿಯೇಲ್ ಮಲಾಖ್ ಬಂದು ದೇವರ ಚಿತ್ತವನ್ನು ತಿಳಿಸಿದ ಪ್ರಕಾರ ಬರೆಸಿದ್ದು ಹ್ಯಾಗಂದರೆ—ಅಲ್ಲನ ಮನಸ್ಸು ನಡಿಯ ಬೇಕು; ಅಲ್ಲ ಅಪ್ಪಣೆ ಕೊಟ್ಟ ಒಂದನ್ನು ಮಾಡಿದರೆ, ಪ್ರವಾದಿಗೆ ಮಾತ್ರವೇ ದೋಷವಿಲ್ಲವೆಂದು, ಹೀಗೆ ನಾಚಿಕೆ ಇಲ್ಲದೆ ಹೇಳಿದ್ದಲ್ಲದೆ, ಹಫ್ಸ ಎಂಬವಳನ್ನು ಮದುವೆ ಮಾಡಿ ಕೊಂಡು, ಇಂಥಾ ವಾರದಲ್ಲಿ ನಿನ್ನನ್ನು ಮಾತ್ರವೇ ಅಂಗೀಕರಿಸುವೆನೆಂದೂ, ಮಿಸ್ರದ ದಾಸಿಯಾದ ಮಿರಿಯಾಮಳನ್ನು ಓಡಿಸ ಬಹುದೆಂದೂ ಆಣೆ ಇಟ್ಟನಂತರ, ಬೇಗವಾಗಿ ಆ ಆಣೆಯನ್ನು ಮರೆತು ಬಿಟ್ಟು, ಮಹಮ್ಮದನು ಮಿರಿಯಾಮಳ ಸಂಗಡ ವ್ಯಭಿಚಾರ

ಮಾಡುವದನ್ನು ಹಫ್ಸಳು ಆ ವಾರದಲ್ಲಿಯೇ ಬಂದು ಸ್ವಂತ ಕಣ್ಣುಗಳಿಂದ ನೋಡಿದಳು. ಅವನ ಹೆಂಡರು ಇದನ್ನು ಕೇಳಿದ ಮೇಲೆ, ಎಲ್ಲರೂ ಕೂಡಿ ಬಂದು—ಎಲಾ ಕಾಮಿಯೇ! ಎಂದೂ, ಆಣೆ ಮೀರಿದವನೇ! ಎಂದೂ ಬೈಯಲಿಕ್ಕೆ ಆರಂಭ ಮಾಡಿದಾಗ, ಪ್ರವಾದಿಯು ಹೆಂಡರನ್ನು ಸುಮ್ಮನಿರಿಸಿ (೬೬ ಸೂರ) ತಿಳಿಸಿದ್ದೇನಂದರೆ—ಎಲ್ಲಾ ಆಣೆಗಳನ್ನು ಒಂದೇ ಪ್ರಕಾರ ಕೈಕೊಳ್ಳ ಬಾರದೆಂದು ಅಲ್ಲ ತಿಳಿಸಿದ್ದಾನೆ; ಅಲ್ಲ ಸರ್ವಜ್ಞನು, ಅವನು ನಿಮ್ಮನ್ನು ಕಾಯುವನು. ಇವುಗಳನ್ನೆಲ್ಲಾ ಆಲೋಚಿಸಿದರೆ, ಪ್ರವಾದಿಯು ದುರ್ವೋಹದ ಪ್ರಕಾರವೇ ಒಂದೊಂದು ಅಪ್ಪಣೆಯನ್ನು ಕೊಟ್ಟಿರುತ್ತಾನೆಂದು ತಿಳಿಯ ಬಹುದು. ಉಳಿದವರಿಗೆ ನಾಲ್ಕು ಹೆಂಡರು ಸಾಕು, ತನಗೆ ಧಾತುಪುಷ್ಟಿ ಹೆಚ್ಚಾಗಿರುವದರಿಂದ ಹತ್ತು ನಾಲ್ವತ್ತು ಹೆಂಡರು ಬೇಕೆಂದು ಹೇಳಿರುವಂಥಾದ್ದು ಎಷ್ಟೋ ನಿಕೃಷ್ಟವಾದ ಅಪ್ಪಣೆಯಾಗಿರುತ್ತದೆ! ಉಪವಾಸದ ದಿವಸಗಳಲ್ಲಿ ಹೆಂಡತಿಯನ್ನು ಮುದ್ದಿಡಲಿಕ್ಕೆ ಯಾರಿಗೂ ನ್ಯಾಯವಿಲ್ಲ; ಆದರೆ ತನಗೆ ಮನಸ್ಸಿದ್ದರೆ, ಮುದ್ದಿಡಲೂ ಶಯಿಸಲೂ ಬಹುದು; ಬೇರೊಬ್ಬರು ಮದುವೆ ಮಾಡಿ ಕೊಳ್ಳುವಾಗ, ಸಾಕ್ಷಿ ಬೇಕು; ತಾನು ಅಬ್ಬಾಸಿ ಎಂಬವನ ಸೊಸೆಯನ್ನು, ತನ್ನ ವಂ

ಶದವಳಾಗಿದ್ದರೂ, ಸಾಕ್ಷಿ ಇಲ್ಲದೆ ಮದುವೆ ಮಾಡಿ ಕೊಂಡನು. ಕೊಳ್ಳೆಯನ್ನು ಪಾಲಿಡುವದಕ್ಕಿಂತ ಮುಂಚೆ ತಾನು ಮಾತ್ರವೇ ಅವಶ್ಯವಾಗಿರುವಂಥಾದ್ದನ್ನು ತೆಗೆದು ಕೊಳ್ಳ ಬಹುದು; ಪಾಲು ಮಾಡಿದನಂತರ ಐದರಲ್ಲಿ ಒಂದು ಪಾಲನ್ನು ಸಹಾ ತೆಗದು ಕೊಳ್ಳುವನು. ನ್ಯಾಯ ತೀರಿಸುವ ಸಮಯದಲ್ಲಿ ವಾದಿಪ್ರತಿವಾದಿಗಳಿಂದ ದಾನಗಳನ್ನು ತಾನು ಮಾತ್ರವೇ ತೆಗದು ಕೊಳ್ಳ ಬಹುದು. ಹೀಗೆ ಈ ಪ್ರವಾದಿಯು ಇಂಥಾ ದೋಷವು ಎಲ್ಲರಿಗೆ ಹರಾಮ್ ಎಂದೂ, ಅದು ತನಗೆ ಮಾತ್ರವೇ ಹಲಾಲ್ ಎಂದೂ ಅನೇಕ ಸಾರಿ ಹೇಳಿರುವದರಿಂದ, ಅವನು ಮೋಸಗಾರನೆಂದು ತಿಳಿದು ಕೊಳ್ಳ ಬಹುದು. ಯೇಸು ಆ ಪ್ರಕಾರ ಮಾಡಲಿಲ್ಲ; ತಾನು ಒಂದನ್ನು ಹೇಳಿದರೆ, ತಾನೇ ಭೇದವಿಲ್ಲದೆ ಹಾಗೆಯೇ ಮಾಡುವನು; ಮತ್ತೊಬ್ಬರಿಗೆ ಇದನ್ನು ಮಾಡ ಬೇಕೆಂದು ಹೇಳುವದಕ್ಕಿಂತ ಮುಂಚಿತವಾಗಿಯೇ ಅದಕ್ಕಿಂತ ಹೆಚ್ಚಾದದ್ದನ್ನು ತಾನೇ ಪೂರೈಸುವನು; ಈ ಜೀವವನ್ನು ಆಶಿಸ ಬಾರದೆಂದು ಹೇಳಿದ್ದಲ್ಲದೆ ತಾನೇ ಸುಖವನ್ನು ಏನೂ ಲಕ್ಷಿಸದೆ, ಮತ್ತೊಬ್ಬರ ಸುಖದ ನಿಮಿತ್ತವಾಗಿ ಕಷ್ಟ ಪಟ್ಟು, ಲೋಕರಕ್ಷಣೆಗಾಗಿ ಪ್ರಾಣವನ್ನು ಸಹಾ ಬಿಟ್ಟು ಕೊಟ್ಟನು. ಮಹಮ್ಮದನು ತನ್ನ

ಸೌಖ್ಯವನ್ನೂ ಮಾನವನ್ನೂ ವಿಚಾರಿಸಿದದರಿಂದ, ಪ್ರವಾದಿಗಳ ಮುದ್ರೆ ಎಂದು ಹೆಚ್ಚಿಸಿ ಕೊಳ್ಳುವದು ನ್ಯಾಯವಾದದ್ದಲ್ಲ, ಅವನು ಯಾರ ನಡತೆಗಾದರೂ ಒಳ್ಳೇ ಮಾದರಿಯನ್ನು ತೋರಿಸಲೇ ಇಲ್ಲ.

೧೩. ಯೇಸು ಪಾಪಿಗಳಿಗೋಸ್ಕರ ತನ್ನನ್ನು ಬಲಿಯಾಗಿ ಕೊಟ್ಟನು. ಈ ಮಾತಿನ ಸಾರವು ಎಷ್ಟೋ ವಿಶೇಷವಾದದ್ದಾಗಿದೆ; ಆದರೆ ಮುಸಲ್ಮಾನರಿಗೂ ಮಾಪಿಳ್ಳೆಯರಿಗೂ ಬಹು ಅನಿಷ್ಟವಾಗಿ ಇರುತ್ತದೆ. ಯಾಕಂದರೆ ಮನಸ್ಸಿನ ಅಹಂಕಾರಕ್ಕಾಗಿಯೇ ಅಹಂಭಾವಿಗಳಾಗಿರುವದರಿಂದ, ಮಹಮ್ಮದ ಮೊದಲಾದವರು ಅಂತರಂಗದಲ್ಲಿರುವ ಪಾಪಶಕ್ತಿಯನ್ನು ಕುರಿತು ಸಮ್ಮತಿಸಿ ಹೇಳಲಿಲ್ಲ. ಎಲ್ಲಾ ಮನುಷ್ಯರು ಒಂದೇ ಪ್ರಕಾರ ಪಾಪದಿಂದ ಹುಟ್ಟುತ್ತಾರೆಂದೂ ಬಾಲ್ಯದಿಂದಲೇ ದೇವರಿಗೆ ಆಗದವರೆಂದೂ ಅವರು ವಿಚಾರಣೆ ಮಾಡದೆ, ತಮ್ಮ ಅಪರಾಧಗಳಿಗಾಗಿ ತಮ್ಮ ಹೃದಯದಲ್ಲಿ ಒಂದು ನೆನಪನ್ನು ದುಃಖವನ್ನು ಇಟ್ಟು ಕೊಳ್ಳುವದಿಲ್ಲ. ಪ್ರವಾದಿಯಾದ ದಾವೀದನು ತನ್ನ ಪಾಪಗಳನ್ನು ಅರಿಕೆ ಮಾಡಿ, ಅತ್ತು, ವ್ಯಸನ ಪಟ್ಟು, ಪಾಪದಿಂದ ಬಿಡುಗಡೆಯಾಗಿ ಹೋಗ ಒಂದು ಮಾರ್ಗವನ್ನು ಹುಡುಕಿದ್ದು ಇತ್ಯಾದಿ ಮು

ಹಮ್ಮದನ ಮನಸ್ಸಿನಲ್ಲಿ ಹೋಗಲಿಲ್ಲ. ಪ್ರವಾದಿಯು ತನಗೆ ಪಾಪ ಉಂಟೆಂದೂ ದೇವರು ಕ್ಷಮಿಸುವಂಥ ಮಾರ್ಗವು ಇಂಥಾದೆಂದೂ ಖುರಾನಿನ ಒಂದು ಸ್ಥಳದಲ್ಲಿಯೂ ಹೇಳಿರುವದಿಲ್ಲ. ಪಾಪದ ಅಗಾಧವನ್ನು ಅರಿಯದವರಿಗೆ ರಕ್ಷಕನು ಬೇಡ, ರೋಗಿಗಳಿಗೆ ಮಾತ್ರವೇ ವೈದ್ಯನಿಂದ ಅವಶ್ಯ ಉಂಟು; ಮುಸಲ್ಮಾನರು ಸಹ ರೋಗಿಗಳು ಅಲ್ಲವೊ? ಆದರೂ ಹೆಚ್ಚಾದವರು ಉಬ್ಬಿ ಕೊಂಡು, ನಾವು ಪಾಪಿಗಳಲ್ಲ, ನಾವು ದುಷ್ಟರಲ್ಲವೆಂದೂ ಅದೃಷ್ಟದ ಪ್ರಕಾರ ಪರಲೋಕಕ್ಕೆ ಶೇರುವೆವೆಂದೂ ಸುಮ್ಮನೆ ಊಹಿಸುತ್ತಾರೆ. ಕೈಯನ್ನೂ ಮುಖವನ್ನೂ ತೊಳೆದು ಕೊಳ್ಳುವದೂ, ಬಾಯಿಯೂ ಮೊಣಕಾಲುಗಳೂ ಪ್ರಾರ್ಥಿಸುವದೂ, ದೇಹವು ಉಪವಾಸ ಮಾಡುವದೂ, ಮಕ್ಕಕ್ಕೆ ಓಡುವದೂ ಎಂಬವುಗಳಿಂದ ಆತ್ಮದ ಶುದ್ಧಿಯೂ ಹ್ಯಾಗೆ ಬಂದೀತು? ಮನುಷ್ಯನು ಏನು ಮಾಡಿದರೂ, ಪಾಪವೂ ಸೈತಾನನೂ ಮೊದಲಾದವುಗಳೆಲಾ ಸರ್ವ ಹೃದಯಗಳಲ್ಲಿ ನೆಲೆಯಾಗಿರುತ್ತವೆ. ತನ್ನನ್ನಾದರೂ ಮತ್ತೊಬ್ಬರನ್ನಾದರೂ ವಿಮೋಚಿಸಲಿಕ್ಕೂ ಗುಣ ಮಾಡಲಿಕ್ಕೂ ಸಾಕಾದವನು ಒಬ್ಬನೂ ಇಲ್ಲ. ದೇವರು ತಾನೇ ನಮ್ಮಲ್ಲಿ ಕಾರುಣ್ಯವಿಟ್ಟು, ನಮಗಾಗಿ ಈ ಭೂಲೋಕಕ್ಕಿಳಿದು ಬಂ

ದು, ನಮ್ಮ ಹೊರೆಗಳನ್ನು ತೆಗದು ಹಾಕದೆ ಇರುತ್ತಿದ್ದರೆ, ನಾಶನದಲ್ಲಿ ಮುಳುಗುತ್ತಿದ್ದೆವು. ಆದದರಿಂದ ನಾವು ಸಂತೋಷ ಪಟ್ಟು, ಯೇಸು ಕ್ರಿಸ್ತನೆಂಬ ಒಬ್ಬ ರಕ್ಷಕನು ನಮಗಿದ್ದಾನೆಂದೂ ಅವನು ಸರ್ವ ಲೋಕದ ಪಾಪಗಳಿಗೆ ಪ್ರಾಯಶ್ಚಿತ್ತವಾಗಿದ್ದಾನೆಂದೂ ದೃಢವಾಗಿ ಸಾಕ್ಷಿ ಹೇಳುತ್ತೇವೆ. ನೀವು ಸಹ ಪಾಪದ ನೋವುಗಳನ್ನು ತಿಳಿದು ಕೊಳ್ಳುವಾಗ, ಈ ವೈದ್ಯಗಾರನನ್ನು ಹುಡುಕಿ ನೋಡಿದರೆ, ಒಳ್ಳೇದಾಗಿರುವದು.

೧೪. ಪಾಪವನ್ನು ಬಿಡದಿದ್ದರೆ, ನರಕದಲ್ಲಿ ಬೀಳುವದು ನಿಶ್ಚಯವೇ; ಆದರೂ ಮೊದಲನೇ ನರಕ ಕ್ರೈಸ್ತರಿಗೂ, ಅತಿ ಕಠಿಣವಾದ ಎರಡನೇದು ಯೆಹೂದ್ಯರಿಗೂ, ಅದಕ್ಕಿಂತ ಕೆಳಗಿನದಾಗಿರುವ ಮೂರನೇದು ನಕ್ಷತ್ರಗಳನ್ನು ಆರಾಧಿಸುವವರಿಗೂ, ನಾಲ್ಕನೇದು ಫಾರ್ಶಿಯರಿಗೂ, ಹೀಗೆ ಒಂದೊಂದು ಮತಭೇದಕ್ಕೆ ತಕ್ಕ ಹಾಗೆ ನರಕದ ವೇಧನೆಯು ಈ ಕ್ರಮವಾಗಿ ವರ್ಧಿಸುತ್ತದೆಂದು ಹೇಳುವಂಥ ಮಾತು ಪ್ರಮಾಣಿಸ ಕೂಡದಾಗಿರುತ್ತದೆ. ದೇವರು ನಿನ್ನ ಮತವು ಯಾವದೆಂದು ಯಾರನ್ನಾದರೂ ಕೇಳಲಿಕ್ಕಿಲ್ಲ; ಭೂಮಿಯಲ್ಲಿ ನಿನ್ನ ಕ್ರಿಯೆಗಳೂ ನಡತೆಯೂ ಯಾವ ವಿಧವಾಗಿತ್ತೆಂದು ಕೇಳು

ವನು; ಆಗ ಸತ್ಯವನ್ನು ತಿಳು ಕೊಂಡಿದ್ದರೂ, ದುಷ್ಕರ್ಮ ವನ್ನು ಮಾಡಿ ನಡಕೊಂಡವರಿಗೆ ಅಧಿಕ ಶಿಕ್ಷೆ ಬರುವದು. ಸತ್ಯವನ್ನು ತಿಳಿದು ಕೊಳ್ಳಲಿಕ್ಕೆ ಉಪಾಯವಿರದಿದ್ದು ತಪ್ಪು ಮಾಡಿದವರಿಗೆ ಅಲ್ಪವಾದ ಶಿಕ್ಷೆಯು ಬಂದೀತು. ಕ್ರೈಸ್ತರ ಸ ಮೂಹದಲ್ಲಿ ವೇದವನ್ನು ಕಲಿತು ಕೊಂಡು ಏನೂ ಕೈಕೊಳ್ಳ ದೆ ಇರುವವರು ಅನೇಕರು ಇದ್ಧಾರೆ. ಅವರಿಗೆ ಸಾಧಾರಣ ನರಕ ಮಾತ್ರವಲ್ಲ, ಎಲ್ಲಾದಕ್ಕಿಂತ ಭಯಂಕರವಾದದ್ದನ್ನು ವಿಧಿಸುವನು. ದೇವರಿಗೆ ಮುಖದಾಕ್ಷಿಣ್ಯ ಇಲ್ಲವಲ್ಲ? ನಾ ನು ಲಾ ಇಲಾಹ್ ಇಲ್ಲಲ್ಲ ಎಂದೂ, ನಾನು ಯೇಸು ಮಾ ತ್ರ ಕರ್ತನೆಂದೂ ಇತ್ಯಾದಿ ಕರೆದಾಗ್ಯೂ, ಶಿಕ್ಷೆಗೆ ಭೇದ ಉಂ ಟಾಗಲಿಕ್ಕಿಲ್ಲ; ನಾನು ಹಂದಿ ಮಾಂಸ ತಿನ್ನಲಿಲ್ಲವೆಂದೂ ದನ ವನ್ನು ಕೊಲ್ಲಲಿಲ್ಲವೆಂದೂ ನಾನು ಈ ಎರಡನ್ನು ಮಾಡಿದ್ಧೇ ನೆಂದೂ ಹೇಳಿದರೂ, ಆ ದಿನದಲ್ಲಿ ದೇವರು ಕೇಳಲಿಕ್ಕಿಲ್ಲಾ. ದೇವರನ್ನೂ ಮನುಷ್ಯರನ್ನೂ ಪ್ರೀತಿ ಮಾಡಿದಿಯೋ? ಇ ಲ್ಲವೋ? ಪ್ರೀತಿ ಮಾಡಿದ್ದು ಮಾತಿನಿಂದಲೋ? ಕ್ರಿಯೆಯಿಂ ದಲೋ? ಪ್ರೀತಿ ಮಾಡದೆ ಇದ್ದದ್ದಕ್ಕೆ ಕಾರಣವೇನು? ಪ್ರೀ ತಿ ಮಾಡಲಿಕ್ಕಿರುವ ಮಾರ್ಗವನ್ನು ನಾನು ಯೇಸುವಿನಲ್ಲಿ ತೋರಿಸಿದ್ಧೇನಲ್ಲಾ? ನೀನು ಅನುಸರಿಸದೆ ಇದ್ದದ್ದು ಯಾಕೆ?

ಎಂಬ ಇಂಥಾ ಪ್ರಶ್ನೆಗಳನ್ನು ಮಾಡುವನು; ಅವುಗಳಿಗೆ ಉತ್ತರ ಕೊಡ ಬೇಕಾದೀತು.

೧೫. ಮುಹಮ್ಮದನು ಪಾಪವನ್ನೂ ನರಕವನ್ನೂ ಚನ್ನಾಗಿ ತಿಳಿಯದೆ ಇದ್ದು, ಸ್ವರ್ಗದ ಸ್ಥಿತಿಗೂ ಬುದ್ಧಿಹೀನತ್ವದಿಂದ ದೂಷಣೆ ಬರ ಮಾಡಿದ್ಧಾನೆ. ತಲೆಬುರುಡೆಯ ಅಕ್ಷರ ಶುಭವಾಗಿ ಬಂದರೆ, ಸತ್ತ ಕೂಡಲೇ ಸರತ್ ಎಂಬ ಶೇತುವೆಯನ್ನು ದಾಟಿ, ಸ್ವರ್ಗದಲ್ಲಿ ಹೊಕ್ಕು, ಒಳ್ಳೇ ತೋಟದಲ್ಲಿ ಕೂತು, ದೂತರ ವಾದ್ಯಘೋಷಗಳನ್ನು ಕೇಳಿ, ರತ್ನಗಳಿಂದ ಅಲಂಕರಿಸಿದ ಗುಡಾರದಲ್ಲಿ ವಾಸಿಸಿ, ಒಳ್ಳೇ ಫಲಗಳನ್ನೂ ಹುರಿದ ಹಾರುವ ಕೋಳಿಗಳನ್ನೂ ಇತ್ಯಾದಿ ಅನುಭವಿಸ ಬಹುದು. ಮುನ್ನೂರು ಹುಡುಗರು ಅಪ್ಪಣೆಗೆ ಕಾದು ಕೊಂಡು, ಉಣ್ಣಲಿಕ್ಕೂ ಕುಡಿಯಲಿಕ್ಕೂ ಕೊಡುತ್ತಾ ಬರುತ್ತಾರೆ. ಎಪ್ಪತ್ತು ಮಂದಿ ಕಾಡಿಗೆಕಣ್ಣಿನ ಕನ್ಯಾಸ್ತ್ರೀಯರು ಬಾಡಿಹೋಗದ ಯೌವನದಿಂದ ಅವನನ್ನು ಸುತ್ತಿ ಕೊಂಡು, ಕುಣಿದಾಡುವರು. ಅವರ ಸಂಗಡ ಭೋಗ ಮಾಡಿದರೆ, ಮೋಹವು ಕಡಿಮೆಯಾಗದೆ ನೂರಷ್ಟು ಹೆಚ್ಚುವದು. ಸಂತತಿ ಬೇಕಾದರೆ, ಸಂಗಡಲೆ ಗರ್ಭ ಧರಿಸಿ ಬೆಳಿಯುತ್ತಾ ಬರುವದು ಎಂದು ಹೀಗೆ ಸ್ವರ್ಗಾವಸ್ಥೆಯನ್ನು ಕುರಿತು ವರ್ಣಿಸುತ್ತಾನೆ;

ಅದಕ್ಕಿಂತಲೂ ದೇವೇಂದ್ರನ ಸ್ವರ್ಗವು ಒಳ್ಳೇದೆಂದು ತೋ
ರುತ್ತದೆ. ಸ್ವರ್ಗದಲ್ಲಿ ಗಂಡು ಹೆಣ್ಣು ಎಂಬ ಭೇದ ಇರಲಿಕ್ಕಿ
ಲ್ಲವೆಂದೂ ಆಡಿಗೂ ಪಶುವಿಗೂ ಇರುವ ಮೋಹಾದಿಗಳು
ಹೋಗಿ ದಿವ್ಯ ಸತ್ಯವೂ ಶುದ್ಧಿಯೂ ಉಂಟಾಗ ಬೇಕೆಂದೂ
ಆ ಮುಹಮ್ಮದನಿಗೆ ತಿಳಿಯಲೇ ಇಲ್ಲ. ಹೀಗೆ ನಿರ್ಮರ್ಯಾ
ದೆಯಾಗಿ ಬೋಧಿಸಿ, ಅರಬಿಯರಿಗೆ ದುರ್ಮೋಹಗಳನ್ನೂ
ಅಸಭ್ಯ ಚಿಂತೆಗಳನ್ನೂ ಹೆಚ್ಚಿಸಿದ್ಧಾನೆ.

೧೬. ಮತ್ತೊಂದನ್ನು ಸಹ ತೋರಿಸ ಬೇಕಾಗುತ್ತದೆ,
ಏನಂದರೆ: ಇಸ್ಲಾಮಿನಲ್ಲಿ ಖಡ್ಗವು ಮುಖ್ಯವಾದದ್ದು; ಬೇ
ರೆ ಮತಗಳಲ್ಲಿ ಅದು ಕಾಣುವದಿಲ್ಲ. ಎಲ್ಲರಲ್ಲಿ ಕರುಣೆ ಇ
ಡುವದು, ಎಲ್ಲರನ್ನು ಸತ್ಯವನ್ನು ಅನುಸರಿಸುವ ಹಾಗೆ ಮಾ
ಡುವದಕ್ಕೆ ತನ್ನ ಪ್ರಾಣವನ್ನು ಸಹ ಕೊಡ ಬೇಕೆಂಬದು ದೇ
ವರ ಅಪ್ಪಣೆಯಾಗಿದೆ. ತಾನೇ ಖಡ್ಗವನ್ನು ತೆಗದು ಕೊಂಡ
ಲ್ಲ, ವಾಕ್ಯವನ್ನು ತಿಳಿಸಿ, ಕೇಳುವವರ ಕೋಪವನ್ನು ತಾಳಿ
ಕೊಳ್ಳುವವರಾಗಿರ ಬೇಕು. ಆದರೆ ಮುಹಮ್ಮದನು ಮಾ
ತ್ರ ಹಾಗೆ ಹೇಳುವದಿಲ್ಲ; ಆದಿಯಲ್ಲಿ (ಸೂರ. ೨, ೫.) ವೇದ
ಗಾರರಾದ ಯೆಹೂದ್ಯ ಕ್ರೈಸ್ತರನ್ನು ವಿರೋಧಿಸ ಬಾರದೆಂ
ದು ಅಪ್ಪಣೆ ಕೊಟ್ಟ ಮೇಲೆ, ವೈರತ್ವವು ಹೆಚ್ಚಾಗುತ್ತಾ ಬಂ

ದ ಕಾಲದಲ್ಲಿ (ಸೂರ ೮, ೯.) ಎಲ್ಲರ ಸಂಗಡ ಯುದ್ಧ ಮಾಡ ಬೇಕೆಂದು ಖಂಡಿತವಾಗಿ ಅಪ್ಪಣೆ ಕೊಟ್ಟನು. ಅಲ್ಲನ ಸನ್ನಿಧಿಯಲ್ಲಿ ಹೋಗಿ ಶೇರಲಿಕ್ಕೆ ನಮಸ್ಕಾರವೂ ಅರ್ಧ ಮರುಪವಾಸವೂ ಬಾಗಲಿನ ವರೆಗೆ ನಡಿಸುತ್ತವೆ. ಹತ್ತರಲ್ಲಿ ಒಂದು ಧರ್ಮ ಕೊಡುವದು ಬಾಗಲನ್ನು ತೆರಿಯುವದೆಂದು ಒಂದು ಕಡೆಯಲ್ಲಿ ಹೇಳಿದ್ದರೂ, ಹೃದಯವೆಂಬ ಚೀಲವನ್ನು ತೆರದು ಮತ್ತೂ ಹೇಳಿದ್ದೇನಂದರೆ: ಖಡ್ಗವು ಪರಲೋಕಕ್ಕೂ ನರಕಕ್ಕೂ ಬೀಗದ ಕೈಯಾಗಿದೆ; ಅಲ್ಲನಿಗಾಗಿ ಒಂದು ದಿವಸ ಹೋರಾಡಿ ಒಂದು ಬಿಂದು ರಕ್ತವನ್ನು ಮಾತ್ರ ಚೆಲ್ಲಿದರೆ, ಅದು ಎರಡು ತಿಂಗಳು ಉಪವಾಸವೂ ಪ್ರಾರ್ಥನೆಯೂ ಮಾಡುವದಕ್ಕಿಂತಲೂ ಹೆಚ್ಚು ಪ್ರಿಯವಾಗಿರುವದು. ಅಲ್ಲನಿಗೋಸ್ಕರ ಮಾಡುವ ಯುದ್ಧದಲ್ಲಿ ಒಬ್ಬನು ಸತ್ತು ಹೋದರೆ, ಅಂಥವನು ಮಾಡಿದ ಎಲ್ಲಾ ಅಪರಾಧಗಳಿಗೂ ಕ್ಷಮೆಯುಂಟು; ನ್ಯಾಯತೀರ್ವಿಕೆಯ ದಿನದಲ್ಲಿ ಅವನ ಘಾಯಗಳು ಬೆಣಚಿ ಹುಳದಂತೆ ಪ್ರಕಾಶಿಸುವವು, ಕಸ್ತೂರಿಯಂತೆ ಪರಿಮಳ ಕೊಡುವವು; ಅಂಗಭೇದವಾಗಿ ಹೋದರೆ, ದೂತರು ತಮ್ಮ ರೆಕ್ಕೆಗಳನ್ನು ಅದಕ್ಕೆ ಬದಲಾಗಿ ಕೊಡ ಬೇಕಾದೀತು.—ಅದಕ್ಕೆ ನಾವು ಹೇಳುವದೇನಂದರೆ:

ಸೈತಾನನು ಆದಿ ಮೊದಲ್ಗೊಂಡು ಕೊಲೆಗಾರನು. ಜೀವವನ್ನು ಬರ ಮಾಡುವದರಲ್ಲಿ ದೇವರಿಗೆ ಆಶೆಯುಂಟು; ಆದದರಿಂದ ಮಹಮ್ಮದನು ಸಹ ಕುದುರೆಯ ಮೇಲೆ ಕೂತು ಕೊಂಡು, ಯುದ್ಧಕ್ಕೆ ಹೋಗಿ, ಯುದ್ಧ ಮಾಡಿ, ಘಾಯಗಳನ್ನು ಹೊಂದಿ, ಶತ್ರುಗಳನ್ನು ಶಪಿಸಿದನು, ಇತ್ಯಾದಿಗಳು ಅವನ ಪಾಪಕ್ಕೆ ದೃಷ್ಟಾಂತಗಳಾಗಿವೆ. ಅರಬಿಯರು ಸುಲುಕೊಳ್ಳಲಿಕ್ಕೆ ಅಭ್ಯಾಸಿಸಿದವರಾಗಿ ಇದ್ದದರಿಂದ, ಪ್ರವಾದಿಯು ಈ ದುರ್ಗುಣವನ್ನು ಗದರಿಸದೆ, ಬಹಳವಾಗಿ ಕೊಳ್ಳೆ ಮಾಡಿ ತಮ್ಮಲ್ಲಿ ಹಂಚಿ ಕೊಂಡದರಿಂದ, ದ್ರವ್ಯವನ್ನು ಆಶಿಸಿ ಯುದ್ಧವನ್ನು ಮಾಡುವ ಹಾಗೆಯೂ ತನ್ನ ಕೂಟದವರು ಪಾಪವನ್ನು ಹೆಚ್ಚಿಸುವ ಹಾಗೆಯೂ ಮಾಡಿದನು. ಯೇಸುವು ಪಾಪಿಗಳಿಗಾಗಿ ತಾನೇ ಕಷ್ಟ ಪಟ್ಟು, ಕ್ರೂಜೆಯ ಮೇಲೆ ಸತ್ತದ್ದಲ್ಲದೆ, ಯಾರಾದರೂ ಕಷ್ಟಕ್ಕೆ ಗುರಿಯಾಗುವ ಹಾಗೆ ಮಾಡಲೇ ಇಲ್ಲ! ವೈರಿಗಳಿಗಾಗಿ ಪ್ರಾರ್ಥಿಸಿ, ಕ್ಷೇಮವನ್ನು ಬರ ಮಾಡಿ, ತನ್ನ ದೂಷಕರನ್ನು ಆಶೀರ್ವದಿಸಿದನು. ಹೀಗೆ ಅನೇಕ ತರವಾಗಿ ದೇವರ ಕಾರ್ಯಗಳಲ್ಲಿ ಖಡ್ಗವು ಪೂರ್ಣವಾಗಿ ವ್ಯರ್ಥವಾದದ್ದೆಂದೂ, ಖಡ್ಗವನ್ನು ತೆಗದು ಕೊಳ್ಳುವವನು ಖಡ್ಗದಿಂದಲೇ ಬೀಳುವನೆಂದೂ, ತಾಳ್ಮೆಗೆ ಜಯ ಉಂಟೆಂದೂ

ತೋರಿಸಿದ್ಧಾನೆ. ಡಂಭವೂ ಗರ್ವವೂ ಅನ್ಯರನ್ನು ಸೈರಿಸದೆ ನಿಂದಿಸುವದೂ ಮುಸಲ್ಮಾನರಲ್ಲಿ ಅಭ್ಯಾಸವಾಗಿ ಹೋಯಿತು; ಆದರೂ ಅದರಿಂದ ಯಾವ ಲಾಭ? ಕ್ರೈಸ್ತ ಮತಕ್ಕೆ ದೇವರ ಪ್ರೀತಿ ಎಂಬದು ಧ್ವಜವಾಗಿರುವದರಿಂದ, ಅನೇಕ ವೈರಿಗಳು ಇದಕ್ಕೆ ವಿರೋಧವಾಗಿ ಎದುರು ನಿಂತರೂ, ಈ ದಿನದ ವರೆಗೂ ಹಬ್ಬಿ ಕೊಂಡು ಬೆಳಿಯುತ್ತಾ ಬಂದಿರುತ್ತದೆ. ಸಮುದ್ರದಲ್ಲಿಯೂ ಒಳ ಪ್ರವೇಶದಲ್ಲಿಯೂ ಕ್ರೈಸ್ತರಿಗೆ ಮಾತ್ರ ಹೆಚ್ಚುವಿಕೆಯೂ ಇಸ್ಲಾಮಿಗೆ ಬಾಡುವಿಕೆಯೂ ಹಿಡಿದಿರುತ್ತದೆ. ಅವರು ಈ ಹಿಂದು ರಾಜ್ಯದಲ್ಲಿ ಬಂದಾಗ, ಇವರ ಅಧಿಕಾರವು ನಿಂತು ಹೋಯಿತು; ಫಾರ್ಸಿ ರಾಜನಿಗೂ ರೂಮ್ ಸುಲ್ತಾನನಿಗೂ ಪ್ರಾಪ್ತಿ ಇಲ್ಲದೆ ಇರುವದರಿಂದ, ರುಸ್ಸರೂ ಇಂಗ್ಲಿಷರೂ ಫ್ರೆಂಚರೂ ಮೊದಲಾದವರಿಗೆ ಹೆದರಿ ನಡುಗುತ್ತಾರೆ. ಬೇರೆ ಸ್ಥಳಗಳಲ್ಲಿಯೂ ಮುಸಲ್ಮಾನರ ಒಂದು ರಾಜ್ಯಕ್ಕೂ ಸುಖ ಇರುವದಿಲ್ಲ; ಯಾಕಂದರೆ ಇಸ್ಲಾಮಿಗೆ ಕ್ಷಮೆ ಎಂಬದು ಇಲ್ಲದೆ ಇರುವದರಿಂದ, ಹೊರಗಿನವರನ್ನು ನಾಯಿಗಳೆಂದು ಧಿಕ್ಕರಿಸುವದಲ್ಲದೆ, ತಮ್ಮೊಳಗೆ ಮಮತೆಯೂ ಬಂಧುದೃಢತ್ವವೂ ಇರುವದಿಲ್ಲ; ಆಳುವವರಲ್ಲಿ ದಯಾಶೀಲವೂ ಪ್ರಜೆಗಳಲ್ಲಿ ವಿಧೇಯತ್ವವೂ ಎಷ್ಟೋ

ದುರ್ಲಭವಾಗಿದೆ! ಆದದರಿಂದ ಇಸ್ಲಾಮ್ ಎಂಬದು ದೇವರ ಕ್ರಿಯೆಯಲ್ಲ; ಮಾನುಷಕ್ರಿಯೆಯಾಗಿರುತ್ತದೆಂದು ತಿಳಿದು ಕೊಳ್ಳ ಬಹುದು. ಅದು ಪರಲೋಕದಿಂದ ಇಳಿಯದೆ, ಪಾತಾಳದಿಂದೇರಿ ಭೂಮಿಯಲ್ಲಿ ವಿಸ್ತರಿಸುತ್ತಾ ಬಂದು, ಮುಂಚೆ ನಾಶನ ಮಾಡಿದಂತೆ ಅವರ ನಾಶಕಾಲವು ಸಮೀಪ ಬಂದಿರುತ್ತದೆ.

ಯೇಸು ಮಾತ್ರವೇ ಪರಲೋಕದಿಂದಿಳಿದು ಬಂದು, ಎಂದಿಗೂ ಬಾಡಿ ಹೋಗದ ಪರಲೋಕರಾಜ್ಯವನ್ನು ಭೂಮಿಯಲ್ಲಿ ಸ್ಥಾಪಿಸಿ, ತನ್ನ ಪ್ರೀತಿಯ ಸ್ಥಿರತ್ವದಿಂದ ಅವನು ಅಹಿತ ರಾಜ್ಯಗಳನ್ನೂ ಪಿಶಾಚನ ಸಂಸ್ಥಾನವನ್ನೂ ಜೈಸುವನೆಂಬದು ನಿಶ್ಚಯ! ಆಗ ಎಲ್ಲಾ ನಾಲಿಗೆಗಳು ಅವನ ನಾಮವನ್ನು ಹೇಳಿ, ದೇವರನ್ನು ಸ್ತುತಿಸುವವು.

ಸಮಾಪ್ತಿ.

ಮಹಮ್ಮದನ ಚರಿತ್ರವು.

೧. ಆದಾಮನ ಮಕ್ಕಳಾದ ಮನುಷ್ಯರನ್ನು ಪಾಪ ಮರಣಗಳಿಂದ ರಕ್ಷಿಸ ಬೇಕೆಂದು ತಂದೆಯಾದ ದೇವರು ತನ್ನ ವಾಕ್ಯವಾಗಿರುವ ಏಕ ಪುತ್ರನನ್ನು ಲೋಕಕ್ಕೆ ಕಳುಹಿಸಿದಾಗ, ಅವನು ದಾವೀದನೆಂಬ ರಾಜಕುಲದಲ್ಲಿ ಮರಿಯಳೆಂಬ (ಮರ್ಯಂ) ಒಬ್ಬ ಕನ್ಯಳಿಂದ ಹುಟ್ಟಿ, ಯೆಹೂದ ರಾಜ್ಯದಲ್ಲಿ ಬೆಳೆದು, ಮೋಶೆ ಪ್ರವಾದಿ(ನಬಿ)ಯ ಮೂಲವಾಗಿ ಬಂದ ದೇವರ ಆಜ್ಞೆಗಳನ್ನೆಲ್ಲಾ ಕೈಕೊಂಡು ನಡೆದು, ದೇವರ ಆತ್ಮದಿಂದ ತುಂಬಿದವನಾಗಿ ಬೋಧಿಸುತ್ತಾ ಅತಿಶಯವಾದ ಪ್ರೀತಿಯ ವೃತ್ತಿಗಳನ್ನು ಮಾಡುತ್ತಾ ಬಂದ ತರುವಾಯ, ಲೋಕದ ರಕ್ಷಣೆಗಾಗಿ ತನ್ನ ಜೀವವನ್ನು ಸಹಾ ಬಲಿಯಾಗಿ ಕೊಟ್ಟು, ಸತ್ತು, ಸತ್ತವರೊಳಗಿಂದ ಎದ್ದು, ತನ್ನನ್ನು ಆಶ್ರಯ ಮಾಡಿ ಕೊಂಡವರಿಗೆ, ಸರ್ವಲೋಕಕ್ಕೆ ಹೋಗಿ ಈ ಸುವಾರ್ತೆಯನ್ನು ಎಲ್ಲಾ ಜನಾಂಗಗಳಿಗೆ ಸಾರ ಬೇಕೆಂದು ಆಜ್ಞಾಪಿಸಿ, ಪರಲೋಕಕ್ಕೇರಿ ಹೋದನು. ಆ ಬಳಿಕ ಮುಂಚೆ